भारत सरकार (emblem motto: सत्यमेव जयते)

ಭಾರತ ಸರ್ಕಾರ

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

# ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ (ನಿಯೋಜನೆಯ ವಿನಿಯಮನ ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1979

(1979 ರ ಅಧಿನಿಯಮ ಸಂಖ್ಯೆ 30)

[11ನೇ ಡಿಸೆಂಬರ್, 2001 ರಂದು ಇದ್ದಂತೆ]

# THE INTER-STATE MIGRANT WORKMEN (REGULATION OF EMPLOYMENT AND CONDITIONS OF SERVICE) ACT, 1979

**(Act No. 30 of 1979)**

**[As on the 11th December, 2001]**

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.

2001

ಭಾರತ ಸರ್ಕಾರ

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

# ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ (ನಿಯೋಜನೆಯ ವಿನಿಯಮನ ಮತ್ತು ಸೇವಾ ಷರತ್ತುಗಳ) ಅಧಿನಿಯಮ, 1979

(1979 ರ ಅಧಿನಿಯಮ ಸಂಖ್ಯೆ 30)

# THE INTER-STATE MIGRANT WORKMEN (REGULATION OF EMPLOYMENT AND CONDITIONS OF SERVICE) ACT, 1979

**(Act No. 30 of 1979)**

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು
ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.

2001

# ಅಂತರ ರಾಜ್ಯ ವಲಸೆ ಹೋಗುವ ಕೆಲಸಗಾರರ (ನಿಯೋಜನೆಯ ವಿನಿಯಮನ ಮತ್ತು ಸೇವಾ ಷರತ್ತುಗಳ) ಅಧಿನಿಯಮ, 1979

## ಪ್ರಕರಣಗಳ ಅನುಕ್ರಮಣಿಕೆ

## ಅಧ್ಯಾಯ- I

### ಪ್ರಾರಂಭಿಕ

ಪ್ರಕರಣಗಳು


1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು


## ಅಧ್ಯಾಯ- II

### ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರನ್ನು ನಿಯೋಜಿಸಿಕೊಳ್ಳುವ ಕಾರ್ಯಸಂಸ್ಥೆಗಳ ನೋಂದಣಿ


3. ನೋಂದಣಿ ಅಧಿಕಾರಿಗಳ ನೇಮಕ
4. ಕೆಲವು ಕಾರ್ಯಸಂಸ್ಥೆಗಳ ನೋಂದಣಿ
5. ಕೆಲವು ಸಂದರ್ಭಗಳಲ್ಲಿ ನೋಂದಣಿಯ ರದ್ದಿಯಾತಿ
6. ನೋಂದಣಿಯಿಲ್ಲದೆ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ ನಿಯೋಜನೆಯ ವಿರುದ್ಧ ಪ್ರತಿಬಂಧ


## ಅಧ್ಯಾಯ- III

### ಕರಾರುಗಾರರಿಗೆ ಲೈಸೆನ್ಸ್ ನೀಡಿಕೆ


7. ಲೈಸೆನ್ಸ್ ನೀಡಿಕೆ ಅಧಿಕಾರಿಗಳ ನೇಮಕ
8. ಕರಾರುಗಾರರಿಗೆ ಲೈಸೆನ್ಸ್ ನೀಡಿಕೆ
9. ಲೈಸೆನ್ಸುಗಳ ನೀಡಿಕೆ
10. ಲೈಸೆನ್ಸುಗಳ ರದ್ದಿಯಾತಿ, ನಿಲಂಬನ ಮತ್ತು ತಿದ್ದುಪಡಿ
11. ಅಪೀಲು


## ಅಧ್ಯಾಯ- IV

### ಕರಾರುಗಾರರ ಕರ್ತವ್ಯಗಳು ಮತ್ತು ಬಾಧ್ಯತೆಗಳು


12. ಕರಾರುಗಾರರ ಕರ್ತವ್ಯಗಳು


## ಅಧ್ಯಾಯ- V

### ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರಿಗೆ ಒದಗಿಸಬೇಕಾದ ಮಜೂರಿಗಳು, ಕ್ಷೇಮಾಭಿವೃದ್ಧಿ ಮತ್ತು ಇತರ ಸೌಲಭ್ಯಗಳು


13. ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರ ಮಜೂರಿ ದರಗಳು ಮತ್ತು ಇತರ ಸೇವಾ ಷರತ್ತುಗಳು
14. ಸ್ಥಳಾಂತರ ಭತ್ಯೆ
15. ಪ್ರಯಾಣ ಭತ್ಯೆ, ಇತ್ಯಾದಿ
16. ಇತರ ಸೌಲಭ್ಯಗಳು
17. ಮಜೂರಿ ಸಂದಾಯಮಾಡುವ ಜವಾಬ್ದಾರಿ

18. ಕೆಲವು ಸಂದರ್ಭಗಳಲ್ಲಿ ಮುಖ್ಯ ನಿಯೋಜಕನ ಹೊಣೆಗಾರಿಕೆ

19. ಹಿಂದಿನ ಹೊಣೆಗಾರಿಕೆಗಳು

## ಅಧ್ಯಾಯ- VI

### ಪರಿಶೀಲನಾ ಸಿಬ್ಬಂದಿ

20. ಪರಿಶೀಲಕರು

## ಅಧ್ಯಾಯ- VII

### ಸಂಕೀರ್ಣ

21. ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರು ಕೆಲವು ಅಧಿನಿಯಮಿತಿಗಳ ಉದ್ದೇಶಗಳಿಗಾಗಿ ನೇಮಕಾತಿಯ ದಿನಾಂಕದಿಂದ ನಿಯೋಜನೆಯಲ್ಲಿರುವರೆಂಬುದಾಗಿ ಭಾವಿಸುವುದು

22. ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರಿಗೆ ಸಂಬಂಧಪಟ್ಟಂತೆ ಕೈಗಾರಿಕಾ ವಿವಾದಗಳ ಬಗೆಗಿನ ಉಪಬಂಧಗಳು

23. ಇಡಬೇಕಾದ ರಿಜಿಸ್ಟರುಗಳು ಮತ್ತು ಇತರ ದಾಖಲೆಗಳು

24. ಅಡ್ಡಿಗಳು

25. ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ ನಿಯೋಜನೆಗೆ ಸಂಬಂಧಿಸಿದ ಉಪಬಂಧಗಳ ಉಲ್ಲಂಘನೆ

26. ಇತರ ಅಪರಾಧಗಳು

27. ಕಂಪನಿಗಳಿಂದ ಅಪರಾಧಗಳು

28. ಅಪರಾಧಗಳ ಸಂಜ್ಞೇಯತೆ

29. ಪ್ರಾಸಿಕ್ಯೂಷನ್‌ಗಳ ಕಾಲಪರಿಮಿತಿ

30. ಈ ಅಧಿನಿಯಮಕ್ಕೆ ಅಸಂಗತವಾದ ಕಾನೂನುಗಳ ಮತ್ತು ಒಪ್ಪಂದಗಳ ಪರಿಣಾಮ

31. ವಿಶೇಷ ಸಂದರ್ಭಗಳಲ್ಲಿ ವಿನಾಯಿತಿ ನೀಡುವ ಅಧಿಕಾರ

32. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ರಕ್ಷಣೆ

33. ನಿರ್ದೇಶನಗಳನ್ನು ನೀಡುವ ಅಧಿಕಾರ

34. ತೊಂದರೆಗಳ ನಿವಾರಣಾಧಿಕಾರ

35. ನಿಯಮ ರಚನಾಧಿಕಾರ

36. ನಿರಸನಗಳು ಮತ್ತು ಉಳಿಸುವಿಕೆಗಳು

ಅನುಸೂಚಿ

ಮುನ್ನುಡಿ

11ನೇ ಡಿಸೆಂಬರ್, 2001 ರಂದು ಇದ್ದಂತೆ, ಅಂತರ- ರಾಜ್ಯ ವಲಸೆಹೋಗುವ ಕೆಲಸಗಾರರ (ನಿಯೋಜನೆಯ ವಿನಿಯಮನ ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1979 ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 04-03-2002ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 22ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 19 ರಿಂದ 31ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ಡಾ॥ ಸುಭಾಷ್ ಸಿ. ಜೈನ್,
ಕಾರ್ಯದರ್ಶಿ,
ವಿಧಾಯೀ ಇಲಾಖೆ,
ಭಾರತ ಸರ್ಕಾರ.

ನವದೆಹಲಿ

## PREFACE

This Edition of The Inter-State Migrant Workmen (Regulation of Employment and Conditions of Service) Act, 1979 as on the 11th December, 2001 contains the authoritative Text of that Act in Kannada which was published in the Gazette of India Extraordinary, Part IX, Section 1, No. 1, Volume 22, dated 04-03-2002 on Pages 19 and 31.

This Kannada Text was published under the authority of the President under Clause (a) of Section 2 of The Authoritative Texts (Central Laws) Act, 1973 and on such publication it became the authoritative Text of that Act in Kannada.

**Dr. Subhash C. Jain,**
Secretary,
Legislative Department,
Government of India

New Delhi.

# ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ (ನಿಯೋಜನೆಯ ವಿನಿಯಮನ ಮತ್ತು ಸೇವಾ ಷರತ್ತುಗಳ) ಅಧಿನಿಯಮ, 1979

ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ ನಿಯೋಜನೆಯನ್ನು ವಿನಿಯಮನಗೊಳಿಸುವ ಮತ್ತು ಅವರ ಸೇವಾ ಷರತ್ತುಗಳಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು:-

## ಅಧ್ಯಾಯ- I

### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಪ್ರಾರಂಭ ಮತ್ತು ಅನ್ವಯ:- (1) ಈ ಅಧಿನಿಯಮವನ್ನು ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ (ನಿಯೋಜನೆಯ ವಿನಿಯಮನ ಮತ್ತು ಸೇವಾ ಷರತ್ತುಗಳ) ಅಧಿನಿಯಮ, 1979 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕುದು.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು:

ಪರಂತು, ಕೇಂದ್ರ ಸರ್ಕಾರವು, ಈ ಅಧಿನಿಯಮವು ಜಾರಿಗೆ ಬರುವ ದಿನಾಂಕದಿಂದ ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ, ಯಾವುದೇ ರಾಜ್ಯದಲ್ಲಿ ಅಥವಾ ರಾಜ್ಯಗಳಲ್ಲಿ ಈ ಅಧಿನಿಯಮದ ಎಲ್ಲ ಉಪಬಂಧಗಳ ಅಥವಾ ಯಾವುದೇ ಉಪಬಂಧದ ಜಾರಿಯನ್ನು, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಮುಂದೂಡುವುದು ಅಥವಾ ಸಡಿಲಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವಾಗಿದೆಯೆಂದು ಅಥವಾ ಯುಕ್ತವಾಗಿದೆಯೆಂದು ಪರಿಗಣಿಸಿದರೆ, ಹಾಗೆ ಮಾಡಬಹುದು.

(4) ಈ ಅಧಿನಿಯಮವು,-

(ಎ) ಹಿಂದಿನ ಹನ್ನೆರಡು ತಿಂಗಳುಗಳ ಯಾವುದೇ ದಿವಸದಂದು ಐದು ಅಥವಾ ಹೆಚ್ಚು ಮಂದಿ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರು (ಇತರ ಕೆಲಸಗಾರರಿಗಿಂತ ಹೆಚ್ಚಿಗೆಯಾಗಿ ಅಥವಾ ಅಲ್ಲದೆ) ಯಾವ ಕಾರ್ಯ ಸಂಸ್ಥೆಯಲ್ಲಿ ನಿಯೋಜಿತರಾಗಿರುವರೋ ಅಥವಾ ನಿಯೋಜಿತರಾಗಿದ್ದರೋ ಆ ಪ್ರತಿಯೊಂದು ಕಾರ್ಯ ಸಂಸ್ಥೆಗೆ;ಮತ್ತು

(ಬಿ) ಹಿಂದಿನ ಹನ್ನೆರಡು ತಿಂಗಳುಗಳ ಯಾವುದೇ ದಿವಸದಂದು ಐದು ಅಥವಾ ಹೆಚ್ಚು ಮಂದಿ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರನ್ನು (ಇತರ ಕೆಲಸಗಾರರಿಗಿಂತ ಹೆಚ್ಚಿಗೆಯಾಗಿ ಅಥವಾ ಅಲ್ಲದೆ) ನಿಯೋಜಿಸಿಕೊಳ್ಳುವ ಅಥವಾ ನಿಯೋಜಿಸಿಕೊಂಡಿದ್ದ ಪ್ರತಿಯೊಬ್ಬ ಕರಾರುಗಾರನಿಗೆ.

- ಅನ್ವಯಿಸುತ್ತದೆ.

2. ಪರಿಭಾಷೆಗಳು:- (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಮುಚಿತ ಸರ್ಕಾರ" ಎಂದರೆ-

(i) (1) ಕೇಂದ್ರ ಸರ್ಕಾರದ ಪ್ರಾಧಿಕಾರದಿಂದ ಅಥವಾ ಅದರ ಮೇರೆಗೆ ನಡೆಯುತ್ತಿರುವ ಯಾವುದೇ ಕೈಗಾರಿಕೆಗೆ ಸಂಬಂಧಿಸುವ ಅಥವಾ ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ನಿಯಂತ್ರಿತ ಕೈಗಾರಿಕೆಗೆ ಸಂಬಂಧಿಸುವ ಯಾವುದೇ ಕಾರ್ಯ ಸಂಸ್ಥೆಗೆ ಸಂಬಂಧಪಟ್ಟಂತೆ; ಅಥವಾ

(2) ಯಾವುದೇ ರೈಲ್ವೆಯ, ದಂಡು ಪ್ರದೇಶ ಮಂಡಲಿಯ, ದೊಡ್ಡ ಬಂದರಿನ, ಗಣಿ ಅಥವಾ ತೈಲ ಕ್ಷೇತ್ರದ ಯಾವುದೇ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ; ಅಥವಾ

(3) ಬ್ಯಾಂಕಿಂಗ್ ಅಥವಾ ವಿಮಾ ಕಂಪನಿಯ ಯಾವುದೇ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ

- ಕೇಂದ್ರಸರ್ಕಾರ

(ii) ಯಾವುದೇ ಇತರ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಆ ಇತರ ಕಾರ್ಯಸಂಸ್ಥೆಯು ಇರುವಂತಹ,

- ರಾಜ್ಯ ಸರ್ಕಾರ

(ಬಿ) ಕಾರ್ಯಸಂಸ್ಥೆಯ ಸಂಬಂಧದಲ್ಲಿ "ಕರಾರುಗಾರ" ಎಂದರೆ ಅಂಥ ಕಾರ್ಯ ಸಂಸ್ಥೆಗೆ ತಯಾರಿಕಾ ಸರಕುಗಳನ್ನು ಅಥವಾ ವಸ್ತುಗಳನ್ನು ಸರಬರಾಜು ಮಾಡುವುದಷ್ಟೇ ಅಲ್ಲದೆ, (ಒಬ್ಬ ಸ್ವತಂತ್ರ ಕರಾರುಗಾರ, ಏಜೆಂಟ್, ನಿಯೋಜಿತ ಅಥವಾ ಬೇರೆ ವ್ಯಕ್ತಿ ಆಗಿ) ಕೆಲಸಗಾರರ ನಿಯೋಜನೆಯ ಮೂಲಕ ಅಥವಾ ಕಾರ್ಯಸಂಸ್ಥೆಗೆ ಕೆಲಸಗಾರರನ್ನು ಒದಗಿಸುವ ಮೂಲಕ ಆ ಕಾರ್ಯಸಂಸ್ಥೆಯ ನಿಗದಿತ ಫಲಪ್ರಾಪ್ತಿಗೆ ಜವಾಬ್ದಾರನಾದ ವ್ಯಕ್ತಿ, ಮತ್ತು ಅದರಲ್ಲಿ ಕೆಲಸಗಾರರನ್ನು ನೇಮಿಸಿಕೊಳ್ಳುವ ಅಥವಾ ನಿಯೋಜಿಸಿಕೊಳ್ಳುವ ಉಪ-ಕರಾರುಗಾರ, ಖಾತಾದಾರ, ಸರದಾರ, ಏಜೆಂಟ್ ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಯಾವನೇ ಇತರ ವ್ಯಕ್ತಿಯು ಒಳಗೊಳ್ಳುತ್ತಾನೆ;

(ಸಿ) "ನಿಯಂತ್ರಿತ ಕೈಗಾರಿಕೆ" ಎಂದರೆ, ಸಾರ್ವಜನಿಕ ಹಿತದೃಷ್ಟಿಯಿಂದ, ಯಾವುದೇ ಕೇಂದ್ರ ಅಧಿನಿಯಮದ ಮೂಲಕ ಕೈಗಾರಿಕೆಯು ಯಾವ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ ಇರುವುದು ಯುಕ್ತವೆಂಬುದಾಗಿ ಘೋಷಿಸಲಾಗಿರುವುದೋ ಆ ಯಾವುದೇ ಕೈಗಾರಿಕೆ;

(ಡಿ) "ಕಾರ್ಯಸಂಸ್ಥೆ" ಎಂದರೆ-

(i) ಸರ್ಕಾರದ ಯಾವುದೇ ಕಚೇರಿ ಅಥವಾ ಇಲಾಖೆ ಅಥವಾ ಸ್ಥಳೀಯ ಪ್ರಾಧಿಕಾರ ; ಅಥವಾ

(ii) ಯಾವುದೇ ಕೈಗಾರಿಕೆ, ವ್ಯಾಪಾರ, ವ್ಯವಹಾರ, ತಯಾರಿಕೆ ಅಥವಾ ವೃತ್ತಿಯನ್ನು ನಡೆಸುತ್ತಿರುವ ಯಾವುದೇ ಸ್ಥಳ;

(ಇ) "ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರ" ಎಂದರೆ ಇನ್ನೊಂದುರಾಜ್ಯದಲ್ಲಿರುವ ಕಾರ್ಯಸಂಸ್ಥೆಯಲ್ಲಿ ನಿಯೋಜನೆಗಾಗಿ ಆ ಕಾರ್ಯ ಸಂಸ್ಥೆಯ ಮುಖ್ಯ ನಿಯೋಜಕನಿಗೆ ಗೊತ್ತಿದ್ದು ಅಥವಾ ಗೊತ್ತಿಲ್ಲದೆಯೇ, ಒಂದು ಒಪ್ಪಂದದ ಅಥವಾ ಇತರ ಏರ್ಪಾಡಿನ ಮೇರೆಗೆ ಒಂದು ರಾಜ್ಯದಲ್ಲಿ ಕರಾರುಗಾರನಿಂದ ಅಥವಾ ಅವನ ಮುಖಾಂತರ ನೇಮಕಗೊಂಡಿರುವ ಯಾವನೇ ವ್ಯಕ್ತಿ;

(ಎಫ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) "ಮುಖ್ಯ ನಿಯೋಜಕ" ಎಂದರೆ,-

(i) ಯಾವುದೇ ಕಚೇರಿಯ ಅಥವಾ ಇಲಾಖೆಯ, ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಸಂಬಂಧದಲ್ಲಿ, ಆ ಕಚೇರಿಯ, ಇಲಾಖೆಯ ಅಥವಾ ಪ್ರಾಧಿಕಾರದ ಮುಖ್ಯಸ್ಥ ಅಥವಾ ಸಂದರ್ಭಾನುಸಾರ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಇತರ ಅಧಿಕಾರಿ;

(ii) ಕಾರ್ಖಾನೆಯ ಸಂಬಂಧದಲ್ಲಿ, ಕಾರ್ಖಾನೆಯ ಮಾಲೀಕ ಅಥವಾ ಅಧಿಭೋಗದಾರ ಮತ್ತು ಒಬ್ಬ ವ್ಯಕ್ತಿಯನ್ನು ಕಾರ್ಖಾನೆಗಳ ಅಧಿನಿಯಮ, 1948ರ ಮೇರೆಗೆ ಕಾರ್ಖಾನೆಯ ವ್ಯವಸ್ಥಾಪಕನೆಂದು ಹೆಸರಿಸಲಾಗಿರುವಲ್ಲಿ, ಹಾಗೆ ಹೆಸರಿಸಲಾದ ವ್ಯಕ್ತಿ;

(iii) ಗಣಿಯ ಸಂಬಂಧದಲ್ಲಿ, ಗಣಿಯ ಮಾಲೀಕ ಅಥವಾ ಏಜೆಂಟ್ ಮತ್ತು ಒಬ್ಬ ವ್ಯಕ್ತಿಯನ್ನು ಗಣಿಯ ವ್ಯವಸ್ಥಾಪಕನೆಂದು ಹೆಸರಿಸಲಾಗಿರುವಲ್ಲಿ ಹಾಗೆ ಹೆಸರಿಸಲಾದ ವ್ಯಕ್ತಿ;

(iv) ಯಾವುದೇ ಇತರ ಕಾರ್ಯಸಂಸ್ಥೆಯ ಸಂಬಂಧದಲ್ಲಿ, ಕಾರ್ಯಸಂಸ್ಥೆಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾದ ಯಾವನೇ ವ್ಯಕ್ತಿ;

ವಿವರಣೆ:- ಈ ಖಂಡದ ಉಪ-ಖಂಡ (iii) ರ ಉದ್ದೇಶಗಳಿಗಾಗಿ "ಗಣಿ", "ಮಾಲೀಕ" ಮತ್ತು "ಏಜೆಂಟ್" ಎಂಬ ಪದಗಳು, ಗಣಿಗಳ ಅಧಿನಿಯಮ, 1952ರ 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಜೆ) ಖಂಡ (ಎಲ್) ಖಂಡ, (ಸಿ) ಖಂಡದಲ್ಲಿ ಅವುಗಳಿಗೆ ಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರತಕ್ಕುದು;

(ಹೆಚ್) "ನೇಮಕಾತಿ" ಎಂಬುದರಲ್ಲಿ ನೇಮಕಾತಿಗಾಗಿ ಯಾವುದೇ ಒಪ್ಪಂದ ಅಥವಾ ಇತರ ಏರ್ಪಾಡು ಮಾಡಿಕೊಳ್ಳುವುದು ಒಳಗೊಳ್ಳುತ್ತದೆ ಮತ್ತು ಆ ಪದದ ಎಲ್ಲ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಯನ್ನು ತದನುಸಾರ ಅರ್ಥೈಸಿಕೊಳ್ಳತಕ್ಕುದು,

(ಐ) "ಮಜೂರಿಗಳು" ಎಂಬ ಪದವು ಮಜೂರಿಗಳ ಸಂದಾಯ ಅಧಿನಿಯಮ, 1936ರ (2)ನೇ ಪ್ರಕರಣದ ಖಂಡ(vi)ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕುದು;

(ಜೆ) "ಕೆಲಸಗಾರ" ಎಂದರೆ ನಿಯೋಜನೆಯ ನಿಬಂಧನೆಗಳು ವ್ಯಕ್ತವಾಗಿರಲಿ ಅಥವಾ ಇಂಗಿತವಾಗಿರಲಿ, ಮಜೂರಿ ಅಥವಾ ಪ್ರತಿಫಲಕ್ಕಾಗಿ, ಯಾವುದೇ ಕುಶಲ, ಅರೆ-ಕುಶಲ ಅಥವಾ ಅಕುಶಲ, ದೈಹಿಕ, ಮೇಲ್ವಿಚಾರಣೆ, ತಾಂತ್ರಿಕ ಅಥವಾ ಲಿಪಿಕ ಕೆಲಸವನ್ನು ಮಾಡಲು ಯಾವುದೇ ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾದ ಅಥವಾ ಅದರ ಕೆಲಸದ ಸಂಬಂಧದಲ್ಲಿ ನಿಯೋಜಿತನಾದ ಯಾವನೇ ವ್ಯಕ್ತಿ, ಆದರೆ-

(i) ಮುಖ್ಯವಾಗಿ ವ್ಯವಸ್ಥಾಪಕ ಅಥವಾ ಆಡಳಿತಾತ್ಮಕ ಸ್ಥಾನದಲ್ಲಿ ನಿಯೋಜಿತನಾಗಿರುವ, ಅಥವಾ

(ii) ಮೇಲ್ವಿಚಾರಣಾ ಸ್ಥಾನದಲ್ಲಿ ನಿಯೋಜಿತನಾಗಿದ್ದು ಪ್ರತಿ ತಿಂಗಳಿಗೆ ಐದು ನೂರು ರೂಪಾಯಿಗಳನ್ನು ಮೀರುವ ಮಜೂರಿಯನ್ನು ಪಡೆಯುವ ಅಥವಾ ಪದಕ್ಕೆ ಸೇರಿದ ಕರ್ತವ್ಯಗಳ ಸ್ವರೂಪದಿಂದಾಗಲಿ ಅಥವಾ ಅವನಲ್ಲಿ ನಿಹಿತವಾದ ಅಧಿಕಾರಗಳ ಕಾರಣದಿಂದಾಗಲಿ ಮುಖ್ಯವಾಗಿ ವ್ಯವಸ್ಥಾಪಕ ಸ್ವರೂಪದ ಪ್ರಕಾರ್ಯಗಳನ್ನು ಚಲಾಯಿಸುವ

\- ಯಾವನೇ ವ್ಯಕ್ತಿಯು ಒಳಗೊಳ್ಳುವುದಿಲ್ಲ.

(2) ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿಲ್ಲದಿರುವ ಯಾವುದೇ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು, ಆ ಪ್ರದೇಶದಲ್ಲಿ ಸಂವಾದಿ ಕಾನೂನು ಏನಾದರೂ ಜಾರಿಯಲ್ಲಿದ್ದರೆ, ಆ ಸಂವಾದಿ ಕಾನೂನಿಗೆ ಮಾಡಲಾದ ಉಲ್ಲೇಖದಂತೆ ಅರ್ಥೈಸತಕ್ಕುದು.

## ಅಧ್ಯಾಯ - II

## ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರನ್ನು ನಿಯೋಜಿಸಿಕೊಳ್ಳುವ ಕಾರ್ಯಸಂಸ್ಥೆಗಳ ನೋಂದಣಿ

3\. ನೋಂದಣಿ ಅಧಿಕಾರಿಗಳ ನೇಮಕ:- ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ,-

(ಎ) ಈ ಅಧ್ಯಾಯದ ಉದ್ದೇಶಗಳಿಗಾಗಿ ಯೋಗ್ಯವೆಂದು ತಾನು ಭಾವಿಸಬಹುದಾದಂತಹ, ಸರ್ಕಾರಿ ಅಧಿಕಾರಿಗಳಾಗಿರುವ, ವ್ಯಕ್ತಿಗಳನ್ನು ನೋಂದಣಿ ಅಧಿಕಾರಿಗಳಾಗಿ ನೇಮಕ ಮಾಡಬಹುದು; ಮತ್ತು

(ಬಿ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನೋಂದಣಿ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕ ಪರಿಮಿತಿಗಳನ್ನು ಪರಿಭಾಷಿಸಬಹುದು.

4. ಕೆಲವು ಕಾರ್ಯಸಂಸ್ಥೆಗಳ ನೋಂದಣಿ:- (1) ಈ ಅಧಿನಿಯಮವು ಅನ್ವಯವಾಗುವ ಕಾರ್ಯಸಂಸ್ಥೆಯ ಪ್ರತಿಯೊಬ್ಬ ಮುಖ್ಯ ನಿಯೋಜಕನು, ಈ ಬಗ್ಗೆ ಸಾಮಾನ್ಯವಾಗಿ ಕಾರ್ಯಸಂಸ್ಥೆಗಳ ಬಗ್ಗೆ ಅಥವಾ ಅವುಗಳ ಯಾವುದೇ ವರ್ಗದ ಬಗ್ಗೆ ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ನಿಗದಿಪಡಿಸಬಹುದಾದಂಥ ಅವಧಿಯೊಳಗೆ ಕಾರ್ಯಸಂಸ್ಥೆಯ ನೋಂದಣಿಗಾಗಿ ನೋಂದಣಿ ಅಧಿಕಾರಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ಅಂಥ ಶುಲ್ಕಗಳ ಸಂದಾಯದ ನಂತರ ಅರ್ಜಿಯನ್ನು ಸಲ್ಲಿಸತಕ್ಕುದು:

ಪರಂತು, ನೋಂದಣಿ ಅಧಿಕಾರಿಗೆ, ಅರ್ಜಿದಾರನು ಸಕಾಲದಲ್ಲಿ ಅರ್ಜಿಯನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದನೆಂದು ಮನವರಿಕೆಯಾದರೆ ನೋಂದಣಿ ಕೋರುವ ಅಂಥ ಯಾವುದೇ ಅರ್ಜಿಯನ್ನು, ನೋಂದಣಿ ಅಧಿಕಾರಿಯು ಈ ಬಗ್ಗೆ ನಿಗದಿಪಡಿಸಿದ ಅವಧಿಯ ಮುಕ್ತಾಯದ ತರುವಾಯ ಸಹ ಸ್ವೀಕರಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ, ನೋಂದಣಿ ಕೋರುವ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳೊಳಗೆ, ನೋಂದಣಿ ಅಧಿಕಾರಿಯು,-

(ಎ) ಅರ್ಜಿಯು ಎಲ್ಲ ವಿಧದಲ್ಲೂ ಪೂರ್ಣವಾಗಿದ್ದರೆ, ಕಾರ್ಯಸಂಸ್ಥೆಯನ್ನು ನೋಂದಾಯಿಸಿಕೊಳ್ಳತಕ್ಕುದು ಮತ್ತು ಕಾರ್ಯಸಂಸ್ಥೆಯ ಮುಖ್ಯ ನಿಯೋಜಕನಿಗೆ ನಿಯಮಿಸಿದ ನಮೂನೆಯಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕುದು; ಮತ್ತು

(ಬಿ) ಅರ್ಜಿಯು ಹಾಗೆ ಪೂರ್ಣವಾಗಿಲ್ಲದಿದ್ದರೆ, ಅರ್ಜಿಯನ್ನು ಕಾರ್ಯಸಂಸ್ಥೆಯ ಮುಖ್ಯ ನಿಯೋಜಕನಿಗೆ ಹಿಂದಿರುಗಿಸತಕ್ಕುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಕಾರ್ಯಸಂಸ್ಥೆಯ ನೋಂದಣಿಗಾಗಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳ ಅವಧಿಯೊಳಗೆ, ಕೋರಲಾಗಿದ್ದ ನೋಂದಣಿ ಪ್ರಮಾಣಪತ್ರವನ್ನು (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ನೋಂದಣಿ ಅಧಿಕಾರಿಯು ನೀಡದಿರುವಲ್ಲಿ ಮತ್ತು ಆ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ಅರ್ಜಿಯನ್ನು ಹಿಂದಿರುಗಿಸಿಲ್ಲದಿರುವಲ್ಲಿ, ನೋಂದಣಿ ಅಧಿಕಾರಿಯು, ಮುಖ್ಯ ನಿಯೋಜಕನಿಂದ ಈ ಬಗ್ಗೆ ಒಂದು ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿವಸಗಳೊಳಗೆ ಕಾರ್ಯಸಂಸ್ಥೆಯನ್ನು ನೋಂದಾಯಿಸಿಕೊಳ್ಳತಕ್ಕುದು ಮತ್ತು ಮುಖ್ಯ ನಿಯೋಜಕನಿಗೆ ನಿಯಮಿಸಿದ ನಮೂನೆಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕುದು.

5. ಕೆಲವು ಸಂದರ್ಭಗಳಲ್ಲಿ ನೋಂದಣಿಯ ರದ್ದಿಯಾತಿ:- ನೋಂದಣಿ ಅಧಿಕಾರಿಗೆ, ಈ ಬಗ್ಗೆ ತನಗೆ ಮಾಡಿದ ಉಲ್ಲೇಖದ ಆಧಾರದ ಮೇಲೆ ಅಥವಾ ಅನ್ಯಥಾ, ಯಾವುದೇ ಕಾರ್ಯಸಂಸ್ಥೆಯ ನೋಂದಣಿಯನ್ನು ಯಾವುದೇ ಮುಖ್ಯ ಸಂಗತಿಯ ತಪ್ಪು ನಿರೂಪಣೆ ಮೂಲಕ ಅಥವಾ ಮುಚ್ಚಿಟ್ಟು ಪಡೆದುಕೊಳ್ಳಲಾಗಿದೆಯೆಂದು ಅಥವಾ ಯಾವುದೇ ಇತರ ಕಾರಣಗಳಿಗಾಗಿ ನೋಂದಣಿಯು ನಿಷ್ಪ್ರಯೋಜಕವಾಗಿರುವುದರಿಂದ ಅಥವಾ ಪರಿಣಾಮಕಾರಿಯಲ್ಲದಿರುವುದರಿಂದ ಅದನ್ನು ರದ್ದುಪಡಿಸುವುದು ಅಗತ್ಯವಾಗಿದೆಯೆಂದು ಮನವರಿಕೆಯಾದರೆ, ನೋಂದಣಿ ಅಧಿಕಾರಿಯು, ಕಾರ್ಯಸಂಸ್ಥೆಯ ಮುಖ್ಯ ನಿಯೋಜಕನಿಗೆ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ಸಮುಚಿತ ಸರ್ಕಾರದ ಪೂರ್ವಾನುಮೋದನೆ ಪಡೆದು ನೋಂದಣಿಯನ್ನು ಲಿಖಿತ ಆದೇಶದ ಮೂಲಕ ರದ್ದುಗೊಳಿಸಬಹುದು ಮತ್ತು ಆದೇಶವನ್ನು ಮುಖ್ಯ ನಿಯೋಜಕನಿಗೆ ತಿಳಿಸಬಹುದು:

ಪರಂತು, ನೋಂದಣಿ ಅಧಿಕಾರಿಯು ಯಾವುವೇ ವಿಶೇಷ ಕಾರಣಗಳಿಗಾಗಿ, ಆದೇಶದ ಮೂಲಕ, ನೋಂದಣಿಯನ್ನು ರದ್ದು ಮಾಡುವುದು ಇತ್ಯರ್ಥವಾಗುವವರೆಗೆ ನೋಂದಣಿ ಪ್ರಮಾಣಪತ್ರದ ಜಾರಿಯನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿವರೆಗೆ ನಿಲಂಬನಗೊಳಿಸುವುದು ಅವಶ್ಯವಾಗಿದೆಯೆಂದು ಪರಿಗಣಿಸಿರುವಲ್ಲಿ ಹಾಗೆ ನಿಲಂಬನಗೊಳಿಸಬಹುದು ಮತ್ತು ಕಾರಣಗಳ ವಿವರಣೆಯೊಂದಿಗೆ ಅಂಥ ಆದೇಶವನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಮುಖ್ಯ ನಿಯೋಜಕನಿಗೆ ಜಾರಿಮಾಡತಕ್ಕುದು ಮತ್ತು ಅಂಥ ಆದೇಶವು, ಹಾಗೆ ಜಾರಿಯಾದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕುದು.

6. ನೋಂದಣಿಯಿಲ್ಲದೆ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ ನಿಯೋಜನೆಯ ವಿರುದ್ಧ ಪ್ರತಿಬಂಧ:- ಈ ಅಧಿನಿಯಮವು ಅನ್ವಯವಾಗುವ ಕಾರ್ಯಸಂಸ್ಥೆಯ ಮುಖ್ಯ ನಿಯೋಜಕನು, ಈ ಅಧಿನಿಯಮದ ಮೇರೆಗೆ ನೀಡಿದ, ಅಂಥ ಕಾರ್ಯಸಂಸ್ಥೆಗೆ ಸಂಬಂಧಿಸಿದ ನೋಂದಣಿ ಪ್ರಮಾಣಪತ್ರವು ಜಾರಿಯಲ್ಲಿದ್ದ ಹೊರತು, ಆ ಕಾರ್ಯ ಸಂಸ್ಥೆಯಲ್ಲಿ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರನ್ನು ನಿಯೋಜಿಸಿಕೊಳ್ಳತಕ್ಕುದಲ್ಲ:

ಪರಂತು, ಯಾವ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮೂಲತ: ಅಥವಾ ವಿಸ್ತರಣೆ ಮಾಡಿದ ಮೇಲಾಗಲಿ ನಿಯಮಿಸಿದ ಅವಧಿಯೊಳಗೆ ಸಲ್ಲಿಸಿದ ನೋಂದಣಿ ಅರ್ಜಿಯು ನೋಂದಣಿ ಅಧಿಕಾರಿಯ ಮುಂದೆ ಇತ್ಯರ್ಥವಾಗದೆ ಉಳಿದಿರುವುದೋ ಆ ಯಾವುದೇ ಕಾರ್ಯಸಂಸ್ಥೆಗೆ ಈ ಪ್ರಕರಣದಲ್ಲಿರುವುದಾವುದೂ ಅನ್ವಯವಾಗತಕ್ಕುದಲ್ಲ ಮತ್ತು ಈ ಪರಂತುಕದ ಉದ್ದೇಶಗಳಿಗಾಗಿ ಯಾವ ಅರ್ಜಿಗೆ 4ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗುತ್ತವೆಯೋ ಆ ಅರ್ಜಿಯು ಆ ಉಪ-ಪ್ರಕರಣದ ಉಪಬಂಧಗಳಿಗನುಸಾರ ನೋಂದಣಿ ಪ್ರಮಾಣ ಪತ್ರವನ್ನು ನೀಡುವವರೆಗೆ ಸಂಬಂಧಪಟ್ಟ ನೋಂದಣಿ ಅಧಿಕಾರಿಯ ಮುಂದೆ ಇತ್ಯರ್ಥವಾಗದೆ ಉಳಿದಿದೆ ಎಂಬುದಾಗಿ ಭಾವಿಸತಕ್ಕುದು.

## ಅಧ್ಯಾಯ - III

### ಕರಾರುಗಾರರಿಗೆ ಲೈಸೆನ್ಸ್ ನೀಡಿಕೆ

7. ಲೈಸೆನ್ಸ್ ನೀಡಿಕೆ ಅಧಿಕಾರಿಗಳ ನೇಮಕ:- ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ,-

(ಎ) ಈ ಅಧ್ಯಾಯದ ಉದ್ದೇಶಗಳಿಗಾಗಿ ಸರ್ಕಾರಿ ಅಧಿಕಾರಿಗಳಾಗಿರುವಂಥ ಮತ್ತು ಲೈಸೆನ್ಸ್ ನೀಡಿಕೆ ಅಧಿಕಾರಿಗಳಾಗಿರಲು ತಾನು ಯೋಗ್ಯವೆಂದು ಭಾವಿಸಬಹುದಾದಂಥ ವ್ಯಕ್ತಿಗಳನ್ನು ಲೈಸೆನ್ಸ್ ನೀಡಿಕೆ ಅಧಿಕಾರಿಗಳನ್ನಾಗಿ ನೇಮಕ ಮಾಡಬಹುದು; ಮತ್ತು

(ಬಿ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಲೈಸೆನ್ಸ್ ನೀಡಿಕೆ ಅಧಿಕಾರಿಗಳಿಗೆ ಪ್ರದತ್ತವಾಗಿರುವ ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು, ಲೈಸೆನ್ಸ್ ನೀಡಿಕೆ ಅಧಿಕಾರಿಯು ಯಾವ ಪರಿಮಿತಿಗಳ ಒಳಗೆ ಚಲಾಯಿಸತಕ್ಕುದೋ ಅವುಗಳನ್ನು ಪರಿಭಾಷಿಸಬಹುದು.

8. ಕರಾರುಗಾರರಿಗೆ ಲೈಸೆನ್ಸ್ ನೀಡಿಕೆ:- (1) ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮವು ಅನ್ವಯವಾಗುವ ಕರಾರುಗಾರನು,-

(ಎ) ಒಂದು ರಾಜ್ಯದಲ್ಲಿನ ಯಾವನೇ ವ್ಯಕ್ತಿಯನ್ನು, ಇನ್ನೊಂದು ರಾಜ್ಯದಲ್ಲಿ ಇರುವ ಯಾವುದೇ ಕಾರ್ಯಸಂಸ್ಥೆಯಲ್ಲಿ ನಿಯೋಜಿಸಿಕೊಳ್ಳುವ ಉದ್ದೇಶಕ್ಕಾಗಿ,-

(i) ಅಂಥ ಕಾರ್ಯಸಂಸ್ಥೆಯು, 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ (i)ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ಕಾರ್ಯಸಂಸ್ಥೆಯಾಗಿದ್ದರೆ, ಕೇಂದ್ರ ಸರ್ಕಾರವು ನೇಮಕಾತಿ ಮಾಡಿರುವ, ಮತ್ತು ನೇಮಕಾತಿಯಾಗುವ ಪ್ರದೇಶದ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ, ಲೈಸೆನ್ಸ್ ನೀಡಿಕೆ ಅಧಿಕಾರಿಯು;

(ii) ಅಂಥ ಕಾರ್ಯಸಂಸ್ಥೆಯು, 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ (ii)ನೇ ಉಪ-ಖಂಡದಲ್ಲಿ ಉಲ್ಲೇಖಿಸಿದ ಕಾರ್ಯಸಂಸ್ಥೆಯಾಗಿದ್ದರೆ, ರಾಜ್ಯಸರ್ಕಾರವು ನೇಮಕಾತಿ ಮಾಡಿರುವ, ಮತ್ತು ನೇಮಕಾತಿಯಾಗುವ ಪ್ರದೇಶದ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ, ಲೈಸೆನ್ಸ್ ನೀಡಿಕೆ ಅಧಿಕಾರಿಯು

- ಈ ಬಗ್ಗೆ ನೀಡಿದ ಲೈಸೆನ್ಸಿನ ಮೇರೆಗೆ ಮತ್ತು ಅದರ ಅನುಸಾರವಾಗಿ ಹೊರತು ನೇಮಕ ಮಾಡಿಕೊಳ್ಳತಕ್ಕುದಲ್ಲ.

(ಬಿ) ಯಾವುದೇ ರಾಜ್ಯದಲ್ಲಿರುವ ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ಕೆಲಸವನ್ನು ನಿರ್ವಹಿಸುವುದಕ್ಕಾಗಿ, ಇನ್ನೊಂದು ರಾಜ್ಯದಿಂದ (ಇತರ ಕೆಲಸಗಾರರಿಗಿಂತಲೂ ಹೆಚ್ಚಿಗೆಯಾಗಿಯಾಗಲಿ ಅಥವಾ ಅಲ್ಲದಿರಲಿ) ವ್ಯಕ್ತಿಗಳನ್ನು, -

(i) ಅಂಥ ಕಾರ್ಯಸಂಸ್ಥೆಯು 2ನೇ ಪ್ರಕರಣದ ಉಪ-ಪ್ರಕರಣ (1)ರ (ಎ)ಖಂಡದ ಉಪ-ಖಂಡ (i)ರಲ್ಲಿ ಉಲ್ಲೇಖಿಸಿದ ಕಾರ್ಯಸಂಸ್ಥೆಯಾಗಿದ್ದರೆ, ಕೇಂದ್ರ ಸರ್ಕಾರದಿಂದ ನೇಮಕಗೊಂಡ ಮತ್ತು ಆ ಕಾರ್ಯಸಂಸ್ಥೆ ಇರುವ ಪ್ರದೇಶದ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲೈಸೆನ್ಸ್ ನೀಡಿಕೆ ಅಧಿಕಾರಿಯು;

(ii) ಅಂಥ ಕಾರ್ಯಸಂಸ್ಥೆಯು 2ನೇ ಪ್ರಕರಣದ ಉಪ-ಪ್ರಕರಣ (1)ರ (ಎ) ಖಂಡದ (ii)ನೇ ಉಪ-ಖಂಡದಲ್ಲಿ ಉಲ್ಲೇಖಿಸಿದ ಕಾರ್ಯಸಂಸ್ಥೆಯಾಗಿದ್ದರೆ, ರಾಜ್ಯಸರ್ಕಾರದಿಂದ ನೇಮಕಗೊಂಡ ಮತ್ತು ಆ ಕಾರ್ಯಸಂಸ್ಥೆ ಇರುವ ಪ್ರದೇಶದ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲೈಸೆನ್ಸ್ ನೀಡಿಕೆ ಅಧಿಕಾರಿಯು

- ಈ ಬಗ್ಗೆ ನೀಡಿದ ಲೈಸೆನ್ಸಿನ ಮೇರೆಗೆ ಅಥವಾ ಅದರ ಅನುಸಾರವಾಗಿ ಹೊರತು ಕೆಲಸಗಾರರನ್ನಾಗಿ ನಿಯೋಜಿಸಿಕೊಳ್ಳತಕ್ಕುದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, (1)ನೇ ಉಪ-ಪ್ರಕರಣದ ಮೇರೆಗಿನ ಲೈಸೆನ್ಸು, ವಿಶೇಷವಾಗಿ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ ಸಂಬಂಧದಲ್ಲಿ, ಕೆಲಸಗಾರನನ್ನು ಯಾವ ಕರಾರಿನ ಅಥವಾ ಏರ್ಪಾಡಿನ ಮೇರೆಗೆ ನೇಮಕಮಾಡಿಕೊಳ್ಳಲಾಗುವುದೋ ಅದನ್ನು, ಅವರಿಗೆ ಸಂದಾಯ ಮಾಡತಕ್ಕ ಪಾರಿಶ್ರಮಿಕವನ್ನು, ಕೆಲಸದ ವೇಳೆಗಳನ್ನು, ವೇತನಗಳನ್ನು ಮತ್ತು ಇತರ ಅವಶ್ಯಕ ಸೌಕರ್ಯಗಳ ನಿರ್ಧರಣೆಯ ನಿಬಂಧನೆಗಳು ಮತ್ತು ಷರತ್ತುಗಳೂ ಸೇರಿ ಸಮುಚಿತ ಸರ್ಕಾರವು, 35ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳೇನಾದರೂ ಇದ್ದರೆ, ಅವುಗಳಿಗನುಸಾರವಾಗಿ ವಿಧಿಸುವುದು ಸೂಕ್ತವೆಂದು ತಾನು ಭಾವಿಸಬಹುದಾದಂಥ ಷರತ್ತುಗಳನ್ನು ಒಳಗೊಂಡಿರಬಹುದು ಮತ್ತು ಅದನ್ನು ನಿಯಮಿಸಬಹುದಾದಂಥ ಶುಲ್ಕಗಳನ್ನು ಸಂದಾಯ ಮಾಡಿದ ನಂತರ ನೀಡತಕ್ಕುದು:

ಪರಂತು, ಯಾವುವೇ ವಿಶೇಷ ಕಾರಣಗಳಿಗಾಗಿ ಲೈಸೆನ್ಸು ನೀಡಿಕೆ ಅಧಿಕಾರಿಗೆ, ಲೈಸೆನ್ಸಿಗಾಗಿ ಅರ್ಜಿ ಸಲ್ಲಿಸಿರುವ ಅಥವಾ ಲೈಸೆನ್ಸನ್ನು ನೀಡಲಾಗಿರುವ ಯಾವನೇ ವ್ಯಕ್ತಿಯನ್ನು ಲೈಸೆನ್ಸಿನ ಷರತ್ತುಗಳ ಯಥೋಚಿತ ಪಾಲನೆಗಾಗಿ ಯಾವುದೇ ಭದ್ರತೆಯನ್ನು ಒದಗಿಸುವಂತೆ ಅಗತ್ಯಪಡಿಸುವುದು ಅವಶ್ಯವಾಗಿದೆಯೆಂದು ಮನವರಿಕೆಯಾದರೆ, ಅವನು, ಅಂಥ ವ್ಯಕ್ತಿಗೆ ಅಂಥ ಕಾರಣಗಳನ್ನು ತಿಳಿಸಿದ ಮತ್ತು ಅವನಿಗೆ ತನ್ನ ನಿಲುವನ್ನು ನಿರೂಪಿಸಲು ಅವಕಾಶವನ್ನು ಕೊಟ್ಟ ತರುವಾಯ ಅಂಥ ವ್ಯಕ್ತಿಯು ಸಂದರ್ಭಾನುಸಾರ ಲೈಸೆನ್ಸನ್ನು ಪಡೆಯುವುದಕ್ಕಾಗಿ ಅಥವಾ ಹೊಂದಿರತಕ್ಕ ಲೈಸೆನ್ಸು ಮುಂದುವರಿಸುವುದಕ್ಕಾಗಿ ಸಲ್ಲಿಸತಕ್ಕ ಭದ್ರತೆಯನ್ನು ಈ ಬಗ್ಗೆ ಮಾಡಲಾದ ನಿಯಮಗಳಿಗನುಸಾರ ನಿರ್ಧರಿಸಬಹುದು.

(3) (2)ನೇ ಉಪ-ಪ್ರಕರಣದ ಪರಂತುಕದ ಮೇರೆಗೆ ಒದಗಿಸುವಂತೆ ಅಗತ್ಯಪಡಿಸಬಹುದಾದ ಭದ್ರತೆಯು ಯುಕ್ತವಾಗಿರತಕ್ಕುದು ಮತ್ತು ಸದರಿ ಪರಂತುಕದ ಉದ್ದೇಶದ ಸಲುವಾಗಿರುವ ನಿಯಮಗಳು, ನಿಯೋಜಿತರಾದ ಕೆಲಸಗಾರರ ಸಂಖ್ಯೆ, ಅವರಿಗೆ ಸಂದಾಯ ಮಾಡಬೇಕಾದ ವೇತನಗಳು, ಅವರಿಗೆ ಒದಗಿಸಬೇಕಾದ ಸೌಲಭ್ಯಗಳು ಮತ್ತು ಅಂಥ ಭದ್ರತೆಯನ್ನು ನಿರ್ಧರಿಸಬಹುದಾಗಿರುವುದಕ್ಕೆ ಸಂಬಂಧಿಸಿದ ಪ್ರಮಾಣಗಳ ಬಗ್ಗೆ ಉಪಬಂಧಿಸುವ ಇತರ ಸುಸಂಬದ್ಧ ಅಂಶಗಳ ಆಧಾರದ ಮೇಲೆ ಇರತಕ್ಕುದು.

9. ಲೈಸೆನ್ಸುಗಳ ನೀಡಿಕೆ:- 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಲೈಸೆನ್ಸು ಮಂಜೂರಾತಿ ಕೋರಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು, ನಿಯಮಿಸಿದ ನಮೂನೆಯಲ್ಲಿ ಸಲ್ಲಿಸತಕ್ಕುದು ಮತ್ತು ಅದು ಕಾರ್ಯಸಂಸ್ಥೆಯ ಸ್ಥಳದ ಪ್ರಕ್ರಿಯೆಯ ಸ್ವರೂಪ, ಯಾವ ಕಾರ್ಯಾಚರಣೆಗಾಗಿ ಅಥವಾ ಕೆಲಸಕ್ಕಾಗಿ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರನ್ನು ನಿಯೋಜಿಸಿಕೊಳ್ಳಬೇಕೋ ಆ ಕಾರ್ಯಾಚರಣೆಯ ಅಥವಾ ಕಾಮಗಾರಿಯ ವಿವರಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ಒಳಗೊಂಡಿರತಕ್ಕುದು.

(2) ಲೈಸೆನ್ಸ್ ನೀಡಿಕೆ ಅಧಿಕಾರಿಯು, (1)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸಿದ ಅರ್ಜಿಯ ಬಗ್ಗೆ ತನಿಖೆಯನ್ನು ಮಾಡಬಹುದು ಮತ್ತು ಅಂಥ ತನಿಖೆಯನ್ನು ಮಾಡುವಲ್ಲಿ ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಲೈಸೆನ್ಸ್ ನೀಡಿಕೆ ಅಧಿಕಾರಿಯು ಅನುಸರಿಸತಕ್ಕುದು.

(3) 8ನೇ ಪ್ರಕರಣದ ಮೇರೆಗೆ ನೀಡಿದ ಲೈಸೆನ್ಸು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿವರೆಗೆ ಸಿಂಧುವಾಗಿರತಕ್ಕುದು ಮತ್ತು ಅದನ್ನು ನಿಯಮಿಸಬಹುದಾದಂಥ ಶುಲ್ಕಗಳನ್ನು ಸಂದಾಯ ಮಾಡಿದ ನಂತರ ಮತ್ತು ಅಂಥ ಷರತ್ತುಗಳ ಮೇಲೆ ಮತ್ತು ಅಂಥ ಅವಧಿವರೆಗೆ ಕಾಲಕಾಲಕ್ಕೆ ನವೀಕರಿಸಬಹುದು.

10. ಲೈಸೆನ್ಸುಗಳ ರದ್ದಿಯಾತಿ, ನಿಲಂಬನ ಮತ್ತು ತಿದ್ದುಪಡಿ:- (1) ಲೈಸೆನ್ಸ್ ನೀಡಿಕೆ ಅಧಿಕಾರಿಗೆ, ಈ ಬಗ್ಗೆ ಅವನಿಗೆ ಮಾಡಿದ ಉಲ್ಲೇಖದ ಮೇಲೆ ಅಥವಾ ಅನ್ಯಥಾ-

(ಎ) 8ನೇ ಪ್ರಕರಣದ ಮೇರೆಗೆ ನೀಡಿದ ಲೈಸೆನ್ಸನ್ನು ಯಾವುದೇ ಮುಖ್ಯ ಅಂಶದ ತಪ್ಪು ನಿರೂಪಣೆಯ ಮೂಲಕ ಅಥವಾ ಅದನ್ನು ಮುಚ್ಚಿಡುವ ಮೂಲಕ ಪಡೆದುಕೊಂಡಿದ್ದಾನೆ; ಅಥವಾ

(ಬಿ) ಯಾವ ಷರತ್ತುಗಳಿಗೊಳಪಟ್ಟು, ಲೈಸೆನ್ಸನ್ನು ನೀಡಲಾಗಿತ್ತೋ ಆ ಷರತ್ತುಗಳನ್ನು ಪಾಲಿಸುವಲ್ಲಿ ಲೈಸೆನ್ಸುಧಾರಕನು ಯುಕ್ತ ಕಾರಣವಿಲ್ಲದೆ ವಿಫಲನಾಗಿದ್ದಾನೆ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆ

- ಎಂದು ಮನವರಿಕೆಯಾದರೆ, ಆಗ, ಈ ಅಧಿನಿಯಮದ ಮೇರೆಗೆ ಲೈಸೆನ್ಸುದಾರನು ಗುರಿಯಾಗಬಹುದಾದ ಯಾವುದೇ ಇತರ ದಂಡಕ್ಕೆ ಬಾಧಕವಾಗದಂತೆ, ಲೈಸೆನ್ಸು ನೀಡಿಕೆ ಅಧಿಕಾರಿಯು, ಲೈಸೆನ್ಸ್‌ದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ತರುವಾಯ, ಲಿಖಿತ ಆದೇಶದ ಮೂಲಕ ಲೈಸೆನ್ಸನ್ನು ರದ್ದುಪಡಿಸಬಹುದು ಅಥವಾ 8ನೇ ಪ್ರಕರಣದ ಉಪ-ಪ್ರಕರಣ(2)ರ ಪರಂತುಕದ ಮೇರೆಗೆ ಅವನು ಸಲ್ಲಿಸಿದ ಭದ್ರತೆಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು ಮತ್ತು ಆ ಆದೇಶವನ್ನು ಲೈಸೆನ್ಸ್‌ದಾರನಿಗೆ ತಿಳಿಸಬಹುದು:

ಪರಂತು, ಲೈಸೆನ್ಸ್ ನೀಡಿಕೆ ಅಧಿಕಾರಿಯು, ಯಾವುವೇ ವಿಶೇಷ ಕಾರಣಗಳಿಗಾಗಿ, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿವರೆಗೆ ಲೈಸೆನ್ಸನ್ನು ರದ್ದುಗೊಳಿಸುವ ತನಕ ಅಥವಾ ಮುಟ್ಟುಗೋಲು ಹಾಕಿಕೊಳ್ಳುವ ತನಕ, ಅದರ ಜಾರಿಯನ್ನು ನಿಲಂಬನಗೊಳಿಸುವುದು ಮತ್ತು ಕಾರಣಗಳ ವಿವರಣೆಯೊಂದಿಗೆ ಅಂಥ ಆದೇಶವನ್ನು ಲೈಸೆನ್ಸ್‌ದಾರನಿಗೆ ನೋಂದಾಯಿತ ಅಂಚೆಯ ಮೂಲಕ ಜಾರಿಮಾಡುವುದು ಅವಶ್ಯವಾಗಿದೆಯೆಂದು ಪರಿಗಣಿಸಿರುವಲ್ಲಿ,

- ಅವನು ಹಾಗೆ ಮಾಡಬಹುದು ಮತ್ತು ಅಂಥ ಆದೇಶವು ಅಂಥ ಜಾರಿಯ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕುದು.

(2) ಈ ಬಗ್ಗೆ ಮಾಡಬಹುದಾದ ಯಾವುವೇ ನಿಯಮಗಳಿಗೊಳಪಟ್ಟು, ಲೈಸೆನ್ಸ್ ನೀಡಿಕೆ ಅಧಿಕಾರಿಯು, 8ನೇ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸನ್ನು ಬದಲಾಯಿಸಬಹುದು ಅಥವಾ ತಿದ್ದುಪಡಿ ಮಾಡಬಹುದು.

11. ಅಪೀಲು:- (1) 4ನೇ ಪ್ರಕರಣದ, 5ನೇ ಪ್ರಕರಣದ, 8ನೇ ಪ್ರಕರಣದ ಅಥವಾ 10ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಆತನಿಗೆ ಆ ಆದೇಶವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿವಸಗಳ ಒಳಗೆ, ಸಮುಚಿತ ಸರ್ಕಾರವು ಈ ಬಗ್ಗೆ ನಾಮನಿರ್ದೇಶನ ಮಾಡಿದ ವ್ಯಕ್ತಿಯಾಗಿರತಕ್ಕ ಅಪೀಲು ಅಧಿಕಾರಿಗೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ದಾಖಲುಮಾಡಲು ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದನೆಂದು ಅಪೀಲು ಅಧಿಕಾರಿಗೆ ಮನವರಿಕೆಯಾದರೆ, ಅವನು ಮೂವತ್ತು ದಿವಸಗಳ ಸದರಿ ಅವಧಿಯು ಮುಗಿದ ತರುವಾಯವೂ ಅಪೀಲನ್ನು ಸ್ವೀಕರಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ನಂತರ, ಅಪೀಲು ಅಧಿಕಾರಿಯು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ತರುವಾಯ ಸಾಧ್ಯವಾದಷ್ಟು ಶೀಘ್ರವಾಗಿ ಅಪೀಲನ್ನು ಇತ್ಯರ್ಥಗೊಳಿಸತಕ್ಕುದು.

## ಅಧ್ಯಾಯ - IV

### ಕರಾರುಗಾರರ ಕರ್ತವ್ಯಗಳು ಮತ್ತು ಬಾಧ್ಯತೆಗಳು

12. ಕರಾರುಗಾರರ ಕರ್ತವ್ಯಗಳು:- (1) ಪ್ರತಿಯೊಬ್ಬ ಕರಾರುಗಾರನು-

(ಎ) ಅಂತರರಾಜ್ಯ ವಲಸೆಹೋಗುವ ಕೆಲಸಗಾರನನ್ನು ಯಾವ ರಾಜ್ಯದಿಂದ ನೇಮಕ ಮಾಡಿಕೊಳ್ಳಲಾಗಿದೆಯೋ ಆ ರಾಜ್ಯದ ಮತ್ತು ಅಂಥ ಕೆಲಸಗಾರರನ್ನು ಯಾವ ರಾಜ್ಯದಲ್ಲಿ ನಿಯೋಜಿಸಿಕೊಳ್ಳಲಾಗಿದೆಯೋ ಆ ರಾಜ್ಯದ ನಿರ್ದಿಷ್ಟಪಡಿಸಿದ ಪ್ರಾಧಿಕಾರಕ್ಕೆ, ನೇಮಕಾತಿಯ ದಿನಾಂಕದಿಂದ ಅಥವಾ ಸಂದರ್ಭಾನುಸಾರ ನಿಯೋಜನೆಯ ದಿನಾಂಕದಿಂದ ಹದಿನೈದು ದಿವಸಗಳೊಳಗೆ, ನಿಯಮಿಸಬಹುದಾದಂಥ ವಿವರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಒದಗಿಸುವುದು ಮತ್ತು ಹಾಗೆ ಒದಗಿಸಿದ ಯಾವುವೇ ವಿವರಗಳಲ್ಲಿ ಯಾವುದೇ ಬದಲಾವಣೆಯಾಗಿರುವಲ್ಲಿ, ಅಂಥ ಬದಲಾವಣೆಯನ್ನು ಆ ಎರಡೂ ರಾಜ್ಯಗಳ ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳಿಗೆ ತಿಳಿಸುವುದು;

(ಬಿ) ಪ್ರತಿಯೊಬ್ಬ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನಿಗೆ ಪಾಸ್‌ಪೋರ್ಟ್ ಅಳತೆಯ ಕೆಲಸಗಾರನ ಭಾವಚಿತ್ರವನ್ನು ಅಂಟಿಸಿದ, ಮತ್ತು ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಮತ್ತು ಕೆಲಸಗಾರನ ಭಾಷೆಯು ಹಿಂದಿ ಅಥವಾ ಇಂಗ್ಲೀಷ್ ಅಲ್ಲದಿರುವಲ್ಲಿ ಆ ಕೆಲಸಗಾರನ ಭಾಷೆಯಲ್ಲಿಯೂ,-

(i) ಕೆಲಸಗಾರನು ನಿಯೋಜಿತನಾಗಿರುವ ಕಾರ್ಯಸಂಸ್ಥೆಯ ಹೆಸರು ಮತ್ತು ಸ್ಥಳ;

(ii) ನಿಯೋಜನೆಯ ಅವಧಿ;

(iii) ಮಜೂರಿಗಳ ಸಂದಾಯದ ಪ್ರಸ್ತಾವಿತ ದರಗಳು ಮತ್ತು ವಿಧಾನಗಳು;

(iv) ಸಂದಾಯ ಮಾಡಬೇಕಾದ ಸ್ಥಳಾಂತರ ಭತ್ಯ;

(v) ಕೆಲಸಗಾರನ ನಿಯೋಜನೆಯ ಅವಧಿಯ ಮುಕ್ತಾಯದ ನಂತರ ಮತ್ತು ನಿಯೋಜನೆಯ ಕರಾರಿನಲ್ಲಿ ನಿಯಮಿಸಬಹುದಾದಂಥ ಆಕಸ್ಮಿಕ ಸಂದರ್ಭಗಳಲ್ಲಿ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಇತರ ಆಕಸ್ಮಿಕ ಸಂದರ್ಭಗಳಲ್ಲಿ ಅವನಿಗೆ ಸಂದಾಯ ಮಾಡಬೇಕಾದ ಮರುಪ್ರಯಾಣದರ;

(vi) ಮಾಡಿರುವ ಕಡಿತಗಳು; ಮತ್ತು

(vii) ನಿಯಮಿಸಬಹುದಾದಂಥ ಇತರ ವಿವರಗಳು

- ಇವುಗಳನ್ನು ಸೂಚಿಸುವ ಪಾಸ್‌ಬುಕ್ಕನ್ನು ನೀಡುವುದು;

(ಸಿ) ನಿಯೋಜಿತನಾಗಿರುವುದು ನಿಂತುಹೋಗಿರುವ, ಪ್ರತಿಯೊಬ್ಬ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನ ಸಂಬಂಧದಲ್ಲಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ, ಕೆಲಸಗಾರನಿಗೆ ಸಂದಾಯ ಮಾಡಬೇಕಾದ ಎಲ್ಲ ಮಜೂರಿಗಳನ್ನು ಮತ್ತು ಇತರ ಬಾಕಿಗಳನ್ನು ಮತ್ತು ಅವನ ರಾಜ್ಯಕ್ಕೆ ವಾಪಸಾಗಲು ಮರುಪ್ರಯಾಣದ ದರವನ್ನು ಸಂದಾಯಮಾಡಲಾಗಿದೆ ಎಂಬ ಘೋಷಣೆಯನ್ನು ಒಳಗೊಂಡಿರತಕ್ಕ ವಿವರ ಪಟ್ಟಿಯನ್ನು, ಅವನನ್ನು ಯಾವ ರಾಜ್ಯದಿಂದ ನೇಮಕಮಾಡಿಕೊಳ್ಳಲಾಗಿದೆಯೋ ಆ ರಾಜ್ಯದಲ್ಲಿನ ಮತ್ತು ಅವನನ್ನು ಯಾವ ರಾಜ್ಯದಲ್ಲಿ ನಿಯೋಜಿಸಿಕೊಳ್ಳಲಾಗಿದೆಯೋ ಆ ರಾಜ್ಯದಲ್ಲಿನ ನಿರ್ದಿಷ್ಟಪಡಿಸಿದ ಪ್ರಾಧಿಕಾರಕ್ಕೆ ಒದಗಿಸುವುದು

- ಅವನ ಕರ್ತವ್ಯವಾಗಿರತಕ್ಕುದು.

(2) ಕರಾರುಗಾರನು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಪಾಸ್‌ಬುಕ್ಕನ್ನು ತಹಲ್‌ವರೆಗೆ ಇಡತಕ್ಕುದು ಮತ್ತು ಅದನ್ನು ಸಂಬಂಧಪಟ್ಟ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನು ತನ್ನ ಬಳಿ ಉಳಿಸಿಕೊಳ್ಳುವಂತೆ ಮಾಡತಕ್ಕುದು.

ವಿವರಣೆ:- ಈ ಪ್ರಕರಣದ ಮತ್ತು 16ನೇ ಪ್ರಕರಣದ ಉದ್ದೇಶಗಳಿಗಾಗಿ "ನಿರ್ದಿಷ್ಟಪಡಿಸಿದ ಪ್ರಾಧಿಕಾರ" ಎಂದರೆ ಈ ಬಗ್ಗೆ ಸಮುಚಿತ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರ.

## ಅಧ್ಯಾಯ - V

## ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರಿಗೆ ಒದಗಿಸಬೇಕಾದ ಮಜೂರಿಗಳು, ಕಲ್ಯಾಣ ಮತ್ತು ಇತರ ಸೌಲಭ್ಯಗಳು

13. ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರ ಮಜೂರಿ ದರಗಳು ಮತ್ತು ಇತರ ಸೇವಾ ಷರತ್ತುಗಳು:- (1) ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನ ಮಜೂರಿ ದರಗಳು, ರಜಾದಿನಗಳು, ಕೆಲಸದ ವೇಳೆಗಳು ಮತ್ತು ಇತರ ಸೇವಾ ಷರತ್ತುಗಳು,-

(ಎ) ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವನೇ ಇತರ ಕೆಲಸಗಾರನು ನಿರ್ವಹಿಸುತ್ತಿರುವಂತಹದೇ ಅಥವಾ ಅದೇ ಬಗೆಯ ಕೆಲಸವನ್ನು ಆ ಕಾರ್ಯಸಂಸ್ಥೆಯಲ್ಲಿ ಅಂಥ ಕೆಲಸಗಾರನು ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅಂಥ ಇತರ ಕೆಲಸಗಾರನಿಗೆ ಅನ್ವಯವಾಗುವಂತಹವೇ ಆಗಿರತಕ್ಕುದು; ಮತ್ತು

(ಬಿ) ಯಾವುದೇ ಇತರ ಸಂದರ್ಭದಲ್ಲಿ, ಸಮುಚಿತ ಸರ್ಕಾರವು ಗೊತ್ತುಪಡಿಸಬಹುದಾದಂಥವು ಆಗಿರತಕ್ಕುದು:

ಪರಂತು, ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನಿಗೆ, ಯಾವುದೇ ಸಂದರ್ಭದಲ್ಲಿ ಕನಿಷ್ಠ ಮಜೂರಿಗಳ ಅಧಿನಿಯಮ, 1948ರ (1948ರ 11) ಮೇರೆಗೆ ನಿಗದಿಪಡಿಸಿರುವ ಮಜೂರಿಗಳಿಗಿಂತ ಕಡಿಮೆ ಮಜೂರಿಗಳನ್ನು ಸಂದಾಯ ಮಾಡತಕ್ಕುದಲ್ಲ.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರನಿಗೆ ಈ ಪ್ರಕರಣದ ಮೇರೆಗೆ ಸಂದಾಯ ಮಾಡತಕ್ಕ ಮಜೂರಿಯನ್ನು ನಗದು ರೂಪದಲ್ಲಿ ಸಂದಾಯ ಮಾಡತಕ್ಕುದು.

14. ಸ್ಥಳಾಂತರ ಭತ್ಯೆ:- (1) ಕರಾರುಗಾರನು, ಪ್ರತಿಯೊಬ್ಬ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನಿಗೆ ಸಂದಾಯ ಮಾಡಬೇಕಾದ ಮಾಸಿಕ ಮಜೂರಿಗಳ ಶೇಕಡಾ ಐವತ್ತಕ್ಕೆ ಸಮನಾದ ಅಥವಾ ಎಪ್ಪತ್ತೈದು ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚಿನದೋ ಅಷ್ಟು ಸ್ಥಳಾಂತರ ಭತ್ಯವನ್ನು ನೇಮಕಾತಿಯ ಸಮಯದಲ್ಲಿ ಸಂದಾಯ ಮಾಡತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ, ಸ್ಥಳಾಂತರ ಭತ್ಯವೆಂದು ಕೆಲಸಗಾರನಿಗೆ ಸಂದಾಯ ಮಾಡಿದ ಮೊಬಲಗನ್ನು ಮರುಪಾವತಿ ಮಾಡತಕ್ಕುದಲ್ಲ ಮತ್ತು ಇದು ಅವನಿಗೆ ಸಂದಾಯ ಮಾಡಬೇಕಾದ ಮಜೂರಿಗಳು ಅಥವಾ ಇತರ ಮೊಬಲಗುಗಳ ಜೊತೆಗೆ ಇರತಕ್ಕುದು.

15. ಪ್ರಯಾಣ ಭತ್ಯ,, ಇತ್ಯಾದಿ:- ಕರಾರುಗಾರನು, ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರನಿಗೆ, ಅವನ ರಾಜ್ಯದ ವಾಸಸ್ಥಳದಿಂದ ಇತರ ರಾಜ್ಯದಲ್ಲಿ ಕೆಲಸ ಮಾಡುವ ಸ್ಥಳಕ್ಕೆ ತಗಲುವ ಪ್ರಯಾಣ ದರಕ್ಕಿಂತ ಕಡಿಮೆಯಲ್ಲದ ಮೊತ್ತದ ಪ್ರಯಾಣ ಭತ್ಯವನ್ನು ಆ ಸ್ಥಳಕ್ಕೆ ಹೋಗುವ ಮತ್ತು ಅಲ್ಲಿಂದ ವಾಪಸು ಬರುವ ಎರಡೂ ಪ್ರಯಾಣಗಳಿಗೆ, ಸಂದಾಯ ಮಾಡತಕ್ಕುದು ಮತ್ತು ಅಂಥ ಕೆಲಸಗಾರನು, ಅವನು ಕರ್ತವ್ಯದ ಮೇಲೆ ಇದ್ದಿದ್ದರೆ ಹೇಗೋ ಹಾಗೆ ಅಂಥ ಪ್ರಯಾಣಗಳ ಅವಧಿಯಲ್ಲಿ ಮಜೂರಿಗಳ ಸಂದಾಯಕ್ಕೆ ಹಕ್ಕುಳ್ಳವನಾಗಿರತಕ್ಕುದು.

16. ಇತರ ಸೌಲಭ್ಯಗಳು:- ಈ ಅಧಿನಿಯಮವು ಅನ್ವಯವಾಗುವ ಕಾರ್ಯಸಂಸ್ಥೆಯ ಕೆಲಸಕ್ಕೆ ಸಂಬಂಧಪಟ್ಟಂತೆ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರನ್ನು ನಿಯೋಜಿಸಿಕೊಳ್ಳುವ ಪ್ರತಿಯೊಬ್ಬ ಕರಾರುಗಾರನು,-

(ಎ) ಅಂಥ ಕೆಲಸಗಾರರಿಗೆ ಮಜೂರಿಗಳು ನಿಯತವಾಗಿ ಸಂದಾಯವಾಗುವುದನ್ನು ಸುನಿಶ್ಚಿತಗೊಳಿಸುವುದು;

(ಬಿ) ಲಿಂಗಭೇದವಿಲ್ಲದೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಸುನಿಶ್ಚಿತಗೊಳಿಸುವುದು;

(ಸಿ) ಅಂಥ ಕೆಲಸಗಾರರ ಸ್ವಂತ ರಾಜ್ಯದಿಂದ ಬೇರೆ ರಾಜ್ಯದಲ್ಲಿ ಕೆಲಸ ಮಾಡಲು ಅವರನ್ನು ಅಗತ್ಯಪಡಿಸಲಾಗಿದೆ ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಕೆಲಸದ ಸೂಕ್ತ ಷರತ್ತುಗಳನ್ನು ಸುನಿಶ್ಚಿತಗೊಳಿಸುವುದು;

(ಡಿ) ಅಂಥ ಕೆಲಸಗಾರರ ನಿಯೋಜನೆಯ ಅವಧಿಯಲ್ಲಿ ಅವರಿಗೆ ಸೂಕ್ತ ವಾಸಸ್ಥಳಾವಕಾಶವನ್ನು ಒದಗಿಸುವುದು ಮತ್ತು ಅದನ್ನು ನಿರ್ವಹಿಸುವುದು;

(ಇ) ಕೆಲಸಗಾರರಿಗೆ ಗೊತ್ತುಪಡಿಸಿದ ವೈದ್ಯಕೀಯ ಸೌಲಭ್ಯಗಳನ್ನು ಉಚಿತವಾಗಿ ಒದಗಿಸುವುದು;

(ಎಫ್) ಕೆಲಸಗಾರರಿಗೆ ಗೊತ್ತುಪಡಿಸಬಹುದಾದಂಥ ರಕ್ಷಕ ಉಡುಪನ್ನು ಒದಗಿಸುವುದು; ಮತ್ತು

(ಜಿ) ಯಾವನೇ ಅಂಥ ಕೆಲಸಗಾರನಿಗೆ ಮರಣಾಂತಿಕ ದುರ್ಘಟನೆ ಅಥವಾ ತೀವ್ರ ದೈಹಿಕ ಕ್ಷತಿ ಉಂಟಾದ ಸಂದರ್ಭದಲ್ಲಿ, ಅದನ್ನು ಎರಡೂ ರಾಜ್ಯಗಳ ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳಿಗೆ ಮತ್ತು ಕೆಲಸಗಾರನ ನಿಕಟ ಬಂಧುಗಳಿಗೆ ತಿಳಿಸುವುದು

- ಅವನ ಕರ್ತವ್ಯವಾಗಿರತಕ್ಕುದು.

17. ಮಜೂರಿ ಸಂದಾಯಮಾಡುವ ಜವಾಬ್ದಾರಿ:- (1) ಕರಾರುಗಾರನು ತಾನು ನಿಯೋಜಿಸಿಕೊಂಡಿರುವ ಅಂತರ-ರಾಜ್ಯ ವಲಸೆಹೋಗುವ ಪ್ರತಿಯೊಬ್ಬ ಕೆಲಸಗಾರನಿಗೆ ಮಜೂರಿಗಳನ್ನು ಸಂದಾಯಮಾಡಲು ಜವಾಬ್ದಾರನಾಗಿರತಕ್ಕುದು ಮತ್ತು ಅಂಥ ಮಜೂರಿಗಳನ್ನು ನಿಯಮಿಸಬಹುದಾದಂಥ ಅವಧಿಯ ಮುಕ್ತಾಯಕ್ಕೆ ಮುಂಚೆ ಸಂದಾಯಮಾಡತಕ್ಕುದು.

(2) ಕರಾರುಗಾರನು ಮಜೂರಿಗಳನ್ನು ಬಟವಾಡೆ ಮಾಡುವ ಸಮಯದಲ್ಲಿ ಹಾಜರಿರಲು, ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಒಬ್ಬ ಪ್ರತಿನಿಧಿಯನ್ನು ಪ್ರತಿಯೊಬ್ಬ ಮುಖ್ಯ ನಿಯೋಜಕನು ನಾಮನಿರ್ದೇಶನ ಮಾಡತಕ್ಕುದು ಮತ್ತು ಮಜೂರಿಯೆಂದು ಸಂದಾಯ ಮಾಡಿದ ಮೊಬಲಗುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಮಾಣೀಕರಿಸುವುದು ಅಂಥ ಪ್ರತಿನಿಧಿಯ ಕರ್ತವ್ಯವಾಗಿರತಕ್ಕುದು.

(3) ಮುಖ್ಯ ನಿಯೋಜಕನ ಅಧಿಕೃತ ಪ್ರತಿನಿಧಿಯ ಸಮ್ಮುಖದಲ್ಲಿ ಮಜೂರಿ ಬಟವಾಡೆಯಾಗುವುದನ್ನು ಖಾತ್ರಿಪಡಿಸಿಕೊಳ್ಳುವುದು ಕರಾರುಗಾರನ ಕರ್ತವ್ಯವಾಗಿರತಕ್ಕುದು.

(4) ಕರಾರುಗಾರನು, ನಿಯಮಿಸಿದ ಅವಧಿಯೊಳಗೆ ಮಜೂರಿಯನ್ನು ಸಂದಾಯಮಾಡಲು ತಪ್ಪಿದ ಅಥವಾ ಕಡಿಮೆ ಸಂದಾಯ ಮಾಡಿದ ಸಂದರ್ಭದಲ್ಲಿ, ಆಗ ಮುಖ್ಯ ನಿಯೋಜಕನು, ಕರಾರುಗಾರನು ನಿಯೋಜಿಸಿಕೊಂಡಿರುವ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನಿಗೆ, ಸಂದರ್ಭಾನುಸಾರ ಮಜೂರಿಯನ್ನು ಪೂರ್ಣವಾಗಿ, ಅಥವಾ ಸಂದಾಯವಾಗದೆ ಬಾಕಿಯಿರುವ ಮಜೂರಿಯನ್ನು ಸಂದಾಯಮಾಡಲು ಮತ್ತು ಹಾಗೆ ಸಂದಾಯ ಮಾಡಿದ ಮೊಬಲಗನ್ನು ಯಾವುದೇ ಕರಾರಿನ ಮೇರೆಗೆ ಆ ಕರಾರುಗಾರನಿಗೆ ಸಂದಾಯ ಮಾಡಬೇಕಾದ ಯಾವುದೇ ಮೊಬಲಗಿನಿಂದ ಕಳೆಯುವ ಮೂಲಕವಾಗಲಿ ಅಥವಾ ಆ ಕರಾರುಗಾರನು ಸಂದಾಯಮಾಡಬೇಕಾದ ಋಣದಂತೆ ಆ ಕರಾರುಗಾರನಿಂದ ವಸೂಲು ಮಾಡಲು ಹೊಣೆಗಾರನಾಗಿರತಕ್ಕುದು.

18. ಕೆಲವು ಸಂದರ್ಭಗಳಲ್ಲಿ ಮುಖ್ಯ ನಿಯೋಜಕನ ಹೊಣೆಗಾರಿಕೆ:- (1) ಈ ಅಧಿನಿಯಮವು ಅನ್ವಯವಾಗುವ ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾಗಿರುವ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರನಿಗೆ 14ನೇ ಪ್ರಕರಣದ ಅಥವಾ 15ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಭತ್ಯೆಯನ್ನು, ಕರಾರುಗಾರನು ಸಂದಾಯ ಮಾಡದೇ ಇದ್ದರೆ ಅಥವಾ 16ನೇ ಪ್ರಕರಣದಲ್ಲಿ ನಿರ್ದಿಷ್ಟಪಡಸಿದ ಯಾವುದೇ ಸೌಲಭ್ಯವನ್ನು ಅಂಥ ಕೆಲಸಗಾರನ ಪ್ರಯೋಜನಕ್ಕಾಗಿ ಒದಗಿಸದಿದ್ದರೆ, ನಿಯಮಿಸಬಹುದಾದಂಥ ಕಾಲದೊಳಗೆ ಮುಖ್ಯ ನಿಯೋಜಕನು ಅಂಥ ಭತ್ಯೆಯನ್ನು ಸಂದಾಯ ಮಾಡತಕ್ಕುದು ಅಥವಾ ಸಂದರ್ಭಾನುಸಾರ ಆ ಸೌಲಭ್ಯವನ್ನು ಒದಗಿಸತಕ್ಕುದು.

(2) ಮುಖ್ಯ ನಿಯೋಜಕನು ಸಂದಾಯ ಮಾಡಿದ ಎಲ್ಲ ಭತ್ಯೆಗಳನ್ನು ಅಥವಾ (i)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸೌಲಭ್ಯವನ್ನು ಒದಗಿಸುವಲ್ಲಿ, ಅವನು ವಹಿಸಿದ ಎಲ್ಲ ವೆಚ್ಚಗಳನ್ನು, ಯಾವುದೇ ಕರಾರಿನ ಮೇರೆಗೆ ಕರಾರುಗಾರನಿಗೆ ಸಂದಾಯ ಮಾಡಬೇಕಾದ ಯಾವುದೇ ಮೊಬಲಗಿನಿಂದ ಕಳೆಯುವ ಮೂಲಕವಾಗಲಿ ಅಥವಾ ಕರಾರುಗಾರನು ಸಂದಾಯಮಾಡಬೇಕಾದ ಋಣದಂತೆ ಕರಾರುಗಾರನಿಂದ ಅವನು ವಸೂಲಿ ಮಾಡಿಕೊಳ್ಳಬಹುದು.

19. ಹಿಂದಿನ ಹೊಣೆಗಾರಿಕೆಗಳು:- ಕರಾರುಗಾರನು ಅಥವಾ ಮುಖ್ಯ ನಿಯೋಜಕನು, ಯಾವನೇ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನಿಗೆ ನೀಡಿದ ಯಾವುದೇ ಸಾಲವು, ಸಂದರ್ಭಾನುಸಾರ, ಸದರಿ ಕರಾರುಗಾರನ ಅಧೀನದಲ್ಲಿರುವ, ಅಥವಾ ಅಂಥ ಮುಖ್ಯ ನಿಯೋಜಕನ ಕಾರ್ಯಸಂಸ್ಥೆಯಲ್ಲಿನ, ಅಂಥ ಕೆಲಸಗಾರನ ನಿಯೋಜನೆಯ ಅವಧಿಯು ಮುಗಿದ ತರುವಾಯ ಬಾಕಿ ಉಳಿದಿಲ್ಲವೆಂದು ಸುನಿಶ್ಚಿತಗೊಳಿಸುವುದು ಅಂಥ ಪ್ರತಿಯೊಬ್ಬ ಕರಾರುಗಾರನ ಮತ್ತು ಪ್ರತಿಯೊಬ್ಬ ಮುಖ್ಯ ನಿಯೋಜಕನ ಕರ್ತವ್ಯವಾಗಿರತಕ್ಕುದು ಮತ್ತು

ತದನುಸಾರವಾಗಿ ಕೆಲಸಗಾರನು ತನ್ನ ನಿಯೋಜನೆಯ ಅವಧಿಯಲ್ಲಿ ಕರಾರುಗಾರನಿಂದ ಅಥವಾ ಮುಖ್ಯ ನಿಯೋಜಕನಿಂದ ತಾನು ಪಡೆದುಕೊಂಡಿರುವ ಮತ್ತು ಅಂಥ ಅವಧಿ ಮುಗಿಯುವುದಕ್ಕೆ ಮುಂಚೆ ತೀರಿಸದೇ ಉಳಿದಿರುವ ಯಾವುದೇ ಋಣವನ್ನು ಮರುಪಾವತಿ ಮಾಡುವ ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನ ಪ್ರತಿಯೊಂದು ಬಾಧ್ಯತೆಯನ್ನು ತೊಡೆದುಹಾಕಲಾಗಿದೆ ಎಂದು ಭಾವಿಸತಕ್ಕುದು ಮತ್ತು ಅಂಥ ಋಣದ ಅಥವಾ ಅದರ ಯಾವುದೇ ಭಾಗದ ವಸೂಲಾತಿಗಾಗಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕುದಲ್ಲ.

## ಅಧ್ಯಾಯ - VI

### ಪರಿಶೀಲನಾ ಸಿಬ್ಬಂದಿ

20. ಪರಿಶೀಲಕರು:- (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಗಳನ್ನು ಪರಿಶೀಲಕರಾಗಿ ನೇಮಕ ಮಾಡಬಹುದು, ಮತ್ತು ಈ ಅಧಿನಿಯಮದ ಮೇರೆಗೆ ಅವರು ತಮ್ಮ ಅಧಿಕಾರಗಳನ್ನು ಚಲಾಯಿಸತಕ್ಕಂಥ ಸ್ಥಳೀಯ ಪರಿಮಿತಿಗಳನ್ನು ನಿರ್ಧರಿಸತಕ್ಕುದು.

(2) ಈ ಬಗ್ಗೆ ರಚಿಸಿರುವ ಯಾವುವೇ ನಿಯಮಗಳಿಗೊಳಪಟ್ಟು, ಯಾವ ಸ್ಥಳೀಯ ಪರಿಮಿತಿಗಳಿಗಾಗಿ ಪರಿಶೀಲಕನನ್ನು ನೇಮಕ ಮಾಡಲಾಗಿದೆಯೋ ಆ ಪರಿಮಿತಿಗಳೊಳಗೆ ಅವನು -

(ಎ) ಅಂತರ-ರಾಜ್ಯ ವಲಸೆ ಹೋಗುವ ಯಾರೇ ಕೆಲಸಗಾರರನ್ನು ಯಾವುದೇ ಆವರಣದಲ್ಲಿ ಅಥವಾ ಸ್ಥಳದಲ್ಲಿ ನಿಯೋಜಿಸಲಾಗಿದೆಯೆಂದು ನಂಬಲು ಅವನಿಗೆ ಕಾರಣವಿದ್ದರೆ,-

(i) ಅಂಥ ಕೆಲಸಗಾರರಿಗೆ ಮಜೂರಿ ಸಂದಾಯ, ಅವರ ಸೇವಾ ಷರತ್ತುಗಳು ಅಥವಾ ಅವರಿಗೆ ಒದಗಿಸಬೇಕಾದ ಸೌಲಭ್ಯಗಳು-ಇವುಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲಾಗುತ್ತಿದೆಯೇ ಎಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ,

(ii) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳು ಇಡಬೇಕೆಂದು ಅಥವಾ ಪ್ರದರ್ಶಿಸಬೇಕೆಂದು ಅಗತ್ಯಪಡಿಸಿರುವ ಯಾವುದೇ ರಿಜಿಸ್ಟರನ್ನು ಅಥವಾ ದಾಖಲೆಯನ್ನು ಅಥವಾ ಯಾವುವೇ ನೋಟೀಸುಗಳನ್ನು ಪರೀಕ್ಷಿಸುವ, ಮತ್ತು ಪರಿಶೀಲನೆಗಾಗಿ ಅವುಗಳನ್ನು ಹಾಜರುಪಡಿಸುವುದನ್ನು ಅಗತ್ಯಗೊಳಿಸುವ ಉದ್ದೇಶಕ್ಕಾಗಿ

- ಅಂಥ ಆವರಣವನ್ನು ಅಥವಾ ಸ್ಥಳವನ್ನು, ಎಲ್ಲ ಯುಕ್ತ ಕಾಲಗಳಲ್ಲಿ, ಅವನು ಸೂಕ್ತವೆಂದು ಯೋಜಿಸುವಂಥ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಸೇವೆಯಲ್ಲಿರುವ ವ್ಯಕ್ತಿಗಳಾಗಿರುವಂಥ ಸಹಾಯಕರು (ಯಾರಾದರೂ ಇದ್ದರೆ) ಅವರೊಡನೆ ಪ್ರವೇಶಿಸಬಹುದು.

(ಬಿ) ಯಾವುದೇ ಅಂಥ ಆವರಣದಲ್ಲಿ ಅಥವಾ ಸ್ಥಳದಲ್ಲಿ ಕಂಡುಬರುವ ಯಾವನೇ ವ್ಯಕ್ತಿಯು, ಅಂತರರಾಜ್ಯ ವಲಸೆಹೋಗುವ ಕೆಲಸಗಾರನೇ ಹೇಗೆ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅಂಥ ವ್ಯಕ್ತಿಯನ್ನು ಪರೀಕ್ಷಿಸಬಹುದು;

(ಸಿ) ಯಾವ ವ್ಯಕ್ತಿಗಳಿಗೆ, ಯಾವ ವ್ಯಕ್ತಿಗಳಿಗಾಗಿ ಕೆಲಸವನ್ನು ಕೊಡಲಾಗಿದೆಯೋ ಅಥವಾ ಯಾವ ವ್ಯಕ್ತಿಗಳಿಂದ ಕೆಲಸವನ್ನು ಪಡೆದುಕೊಳ್ಳಲಾಗಿದೆಯೋ ಆ ವ್ಯಕ್ತಿಗಳ ಹೆಸರುಗಳು ಮತ್ತು ವಿಳಾಸಗಳಿಗೆ ಸಂಬಂಧಪಟ್ಟಂತೆ ಮತ್ತು ಆ ಕೆಲಸಕ್ಕಾಗಿ ಮಾಡಬೇಕಾದ ಸಂದಾಯಗಳಿಗೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಕೊಡುವುದು ಯಾವನೇ ಕೆಲಸವನ್ನು ಕೊಡುವ ವ್ಯಕ್ತಿಯ ಅಧಿಕಾರದಲ್ಲಿದ್ದು ಅಂಥ ಮಾಹಿತಿಯನ್ನು ಕೊಡುವಂತೆ ಅವನನ್ನು ಅಗತ್ಯಪಡಿಸಬಹುದು;

(ಡಿ) ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನು ಮುಖ್ಯ ನಿಯೋಜಕನು ಅಥವಾ ಕರಾರುಗಾರನು ಮಾಡಿರುವನೆಂದು ಅವನಿಗೆ ನಂಬಲು ಕಾರಣವಿದೆಯೋ ಆ ಅಪರಾಧಕ್ಕೆ ಸಂಬಂಧಪಟ್ಟಂತೆ ಅವನು ಸುಸಂಗತವೆಂದು ಪರ್ಯಾಲೋಚಿಸಬಹುದಾದಂಥ ರಿಜಿಸ್ಟರನ್ನು, ಮಜೂರಿಗಳ ದಾಖಲೆಯನ್ನು ಅಥವಾ ನೋಟೀಸುಗಳನ್ನು ಅಥವಾ ಅದರ ಭಾಗಗಳನ್ನು ಅಭಿಗ್ರಹಿಸಬಹುದು ಅಥವಾ ಅವುಗಳ ಪ್ರತಿಗಳನ್ನು ತೆಗೆದುಕೊಳ್ಳಬಹುದು; ಮತ್ತು

(ಇ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(3) (1) ಮತ್ತು (2)ನೇ ಉಪ-ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದರೂ, ಒಂದು ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು, ಆ ರಾಜ್ಯಕ್ಕೆ ಸೇರಿದ ಮತ್ತು ಬೇರೆ ರಾಜ್ಯದಲ್ಲಿ ಇರುವ ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾಗಿರುವ ಯಾರೇ ಕೆಲಸಗಾರರಿಗೆ ಸಂಬಂಧಿಸಿದಂತೆ ಪಾಲಿಸಲಾಗುತ್ತಿದೆಯೆಂದು ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅಗತ್ಯವೆಂದು ಪರ್ಯಾಲೋಚಿಸಿದರೆ, ಅದು ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ (2)ನೇ ಉಪ-ಪ್ರಕರಣದಲ್ಲಿ ನಮೂದಿಸಿರುವಂಥ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ, ಆ ಸರ್ಕಾರದ ಸೇವೆಯಲ್ಲಿರುವಂತಹ ವ್ಯಕ್ತಿಗಳಾಗಿರುವವರನ್ನು ನೇಮಕ ಮಾಡಬಹುದು:

ಪರಂತು, ಅಂಥ ಕೆಲಸಗಾರರು ಯಾವ ರಾಜ್ಯದಲ್ಲಿ ನಿಯೋಜಿತರಾಗಿರುವರೋ ಆ ರಾಜ್ಯಸರ್ಕಾರದ ಸಹಮತಿಯಿಲ್ಲದೆ ಅಥವಾ ಆ ಕಾರ್ಯಸಂಸ್ಥೆಯು, 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ (i)ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ಕಾರ್ಯಸಂಸ್ಥೆಯಾಗಿರುವಲ್ಲಿ, ಕೇಂದ್ರ ಸರ್ಕಾರದ ಸಹಮತಿ ಇಲ್ಲದೆ ಅಂಥ ಆದೇಶವನ್ನು ಹೊರಡಿಸತಕ್ಕುದಲ್ಲ.

(4) ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪೇಡಿಸಲು ಅಥವಾ ಅಗತ್ಯವಾಗಿರುವ ಯಾವುದೇ ಮಾಹಿತಿಯನ್ನು ಕೊಡಲು(2)ನೇ ಉಪ-ಪ್ರಕರಣದ ಮೇರೆಗೆ ಪರಿಶೀಲಕನು ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿಯು,

ಅಗತ್ಯಪಡಿಸಿರುವ ಯಾವನೇ ವ್ಯಕ್ತಿಯು, ಭಾರತ ದಂಡ ಸಂಹಿತೆಯ (1860ರ 45) 175ನೇ ಪ್ರಕರಣದ ಮತ್ತು 176ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಹಾಗೆ ಮಾಡಲು ಕಾನೂನು ಸಮ್ಮತವಾಗಿ ಬದ್ಧನಾಗಿರುವನೆಂದು ಭಾವಿಸತಕ್ಕುದು.

(5) ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು, ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರೆಂಟಿನ ಅಧಿಕಾರದ ಮೇರೆಗೆ ಮಾಡಿದ ಯಾವುದೇ ಶೋಧನೆಗೆ ಅಥವಾ ಅಭಿಗ್ರಹಣಕ್ಕೆ ಅವುಗಳು ಅನ್ವಯಿಸುವಂತೆಯೇ, ಈ ಪ್ರಕರಣದ ಮೇರೆಗಿನ ಯಾವುದೇ ಶೋಧನೆಗೂ ಅಥವಾ ಅಭಿಗ್ರಹಣಕ್ಕೂ ಸಾಧ್ಯವಾದಮಟ್ಟಿಗೆ ಅನ್ವಯವಾಗತಕ್ಕುದು.

## ಅಧ್ಯಾಯ - VII

### ಸಂಕೀರ್ಣ

21. ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರು ಕೆಲವು ಅಧಿನಿಯಮಿತಿಗಳ ಉದ್ದೇಶಗಳಿಗಾಗಿ ನೇಮಕಾತಿಯ ದಿನಾಂಕದಿಂದ ನಿಯೋಜನೆಯಲ್ಲಿರುವರೆಂಬುದಾಗಿ ಭಾವಿಸುವುದು:- ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳ ಉದ್ದೇಶಗಳಿಗಾಗಿ, ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರನನ್ನು, ಅವನ ನೇಮಕಾತಿಯ ದಿನಾಂಕದಂದು ಮತ್ತು ಆ ದಿನಾಂಕದಿಂದ ಯಾವ ಕಾರ್ಯಸಂಸ್ಥೆಯ ಕಾರ್ಯದ ಸಂಬಂಧದಲ್ಲಿ ಅವನನ್ನು ನಿಯೋಜಿಸಲಾಗಿದೆಯೋ ಆ ಕಾರ್ಯಸಂಸ್ಥೆಯಲ್ಲಿ ಅಥವಾ ಸಂದರ್ಭಾನುಸಾರ ಮೊದಲನೆಯ ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾಗಿರುವನೆಂದು ಮತ್ತು ವಾಸ್ತವವಾಗಿ ಕಾರ್ಯನಿರ್ವಹಿಸಿರುವನೆಂದು ಭಾವಿಸತಕ್ಕುದು.

22. ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರಿಗೆ ಸಂಬಂಧಪಟ್ಟಂತೆ ಕೈಗಾರಿಕಾ ವಿವಾದಗಳ ಬಗೆಗಿನ ಉಪಬಂಧಗಳು:- (1) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರಲ್ಲಿ ಏನೇ ಇದ್ದರೂ, ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರನ ನಿಯೋಜನೆಗೆ ಅಥವಾ ಅನಿಯೋಜನೆಗೆ ಅಥವಾ ನಿಯೋಜನೆಯ ನಿಬಂಧನೆಗಳಿಗೆ ಅಥವಾ ಕಾರ್ಮಿಕ ಷರತ್ತುಗಳಿಗೆ ಸಂಬಂಧಪಟ್ಟ ಯಾವುದೇ ವಿವಾದವನ್ನು ಅಥವಾ ಭಿನ್ನಾಭಿಪ್ರಾಯವನ್ನು (ಈ ಪ್ರಕರಣದಲ್ಲಿ ಇನ್ನು ಮುಂದೆ ಕೈಗಾರಿಕಾ ವಿವಾದವೆಂಬುದಾಗಿ ಉಲ್ಲೇಖಿಸಲಾಗಿದೆ),-

(ಎ) ಆ ಕೈಗಾರಿಕಾ ವಿವಾದವು 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ (i) ನೇ ಉಪ-ಖಂಡದಲ್ಲಿ ಉಲ್ಲೇಖಿಸಿದ ಕಾರ್ಯಸಂಸ್ಥೆಗೆ ಸಂಬಂಧಪಡುವುದಾದರೆ,-

(i) ಆ ಕಾರ್ಯಸಂಸ್ಥೆ ಇರುವ ರಾಜ್ಯದಲ್ಲಿನ;

(ii) ಅಂಥ ಕೆಲಸಗಾರನು, ಅವನು ತನ್ನ ನಿಯೋಜನೆಯ ಮುಕ್ತಾಯದ ತರುವಾಯ ತನ್ನನ್ನು ನೇಮಕ ಮಾಡಲಾಗಿದ್ದ ರಾಜ್ಯಕ್ಕೆ ತಾನು ವಾಪಸಾಗಿದ್ದೇನೆಂಬ ಆಧಾರದ ಮೇಲೆ ಆ ಸರ್ಕಾರಕ್ಕೆ ಆ ಬಗ್ಗೆ ಅರ್ಜಿಸಲ್ಲಿಸಿದ್ದರೆ, ಆ ರಾಜ್ಯದಲ್ಲಿನ

- ಸದರಿ ಅಧಿನಿಯಮದ ಉಪಬಂಧಗಳ ಮೇರೆಗೆ ಕೇಂದ್ರ ಸರ್ಕಾರವು ಆ ಅಧಿನಿಯಮದ IIನೆಯ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿರುವ ಪ್ರಾಧಿಕಾರಗಳ ಪೈಕಿ ಯಾರಿಗಾದರೂ (ಈ ಪ್ರಕರಣದಲ್ಲಿ ಇನ್ನು ಮುಂದೆ ಸದರಿ ಪ್ರಾಧಿಕಾರಿಗಳೆಂದು ಉಲ್ಲೇಖಿಸಲಾಗಿದೆ) ಕಳುಹಿಸಬಹುದು.

(ಬಿ) ಆ ಕೈಗಾರಿಕಾ ವಿವಾದವು 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ (ii) ನೇ ಉಪ-ಖಂಡದಲ್ಲಿ ಉಲ್ಲೇಖಿಸಿದ ಕಾರ್ಯಸಂಸ್ಥೆಗೆ ಸಂಬಂಧಪಡುವುದಾದರೆ, -

(i) ಸದರಿ ಅಧಿನಿಯಮದ ಉಪಬಂಧಗಳ ಮೇರೆಗೆ ಆ ಕಾರ್ಯಸಂಸ್ಥೆಯು ಇರುವಂಥ ರಾಜ್ಯದ ಸರ್ಕಾರವು ಆ ರಾಜ್ಯದಲ್ಲಿನ, ಸದರಿ ಪ್ರಾಧಿಕಾರಗಳ ಪೈಕಿ ಯಾರಿಗಾದರೂ ಕಳಿಸಬಹುದು; ಅಥವಾ

(ii) ಅಂಥ ಕೆಲಸಗಾರನನ್ನು ಯಾವ ರಾಜ್ಯದಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿತ್ತೋ ಆ ರಾಜ್ಯದ ಸರ್ಕಾರವು, ಅವನು ತನ್ನ ನಿಯೋಜನೆಯ ಮುಕ್ತಾಯದ ತರುವಾಯ ಆ ರಾಜ್ಯಕ್ಕೆ ವಾಪಸಾಗಿದ್ದೇನೆಂಬ ಆಧಾರದ ಮೇಲೆ ಆ ಸರ್ಕಾರಕ್ಕೆ ಆ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದರೆ, ಸದರಿ ಅಧಿನಿಯಮದ ಉಪಬಂಧಗಳ ಮೇರೆಗೆ ಆ ರಾಜ್ಯದಲ್ಲಿನ ಅಧಿಕಾರಿಗಳ ಪೈಕಿ ಯಾರಿಗಾದರೂ ಕಳಿಸಬಹುದು:

ಪರಂತು,-

(ಎ) (ಎ) ಖಂಡದ (ii)ನೇ ಉಪ-ಖಂಡದಲ್ಲಿ ಅಥವಾ (ಬಿ) ಖಂಡದ (ii)ನೇ ಉಪ-ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಅರ್ಜಿಯನ್ನು, ಅರ್ಜಿದಾರನು ಆ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸುವುದಕ್ಕೆ ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದನೆಂದು ಸಂಬಂಧಪಟ್ಟ ಸರ್ಕಾರಕ್ಕೆ ಮನವರಿಕೆಯಾದ ಹೊರತು, ಅವನ ನಿಯೋಜನೆಯ ಮುಕ್ತಾಯದ ತರುವಾಯ ನೇಮಕ ಮಾಡಿಕೊಂಡಿದ್ದ ರಾಜ್ಯಕ್ಕೆ ಅವನು ವಾಪಸಾದ ದಿನಾಂಕದಿಂದ ಆರು ತಿಂಗಳ ಅವಧಿಯ ಮುಕ್ತಾಯದ ತರುವಾಯ ಸ್ವೀಕರಿಸತಕ್ಕುದಲ್ಲ.

(ಬಿ) ಸದರಿ (ಬಿ) ಖಂಡದ (ii)ನೇ ಉಪ-ಖಂಡದ ಮೇರೆಗಿನ ಯಾವುದೇ ಉಲ್ಲೇಖವನ್ನು ಸಂಬಂಧಪಟ್ಟ ಕಾರ್ಯಸಂಸ್ಥೆಯು ಇರುವಂಥ ರಾಜ್ಯಸರ್ಕಾರದ ಸಹಮತಿಯನ್ನು ಪಡೆದುಕೊಂಡ ಹೊರತು ಮಾಡತಕ್ಕುದಲ್ಲ.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ 33ಬಿ ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಆ ಕಾರ್ಯಸಂಸ್ಥೆಯು ಇರುವಂಥ ರಾಜ್ಯದಲ್ಲಿನ ಸದರಿ ಪ್ರಾಧಿಕಾರಿಗಳ ಪೈಕಿ ಯಾವನೇ ಪ್ರಾಧಿಕಾರಿಯ ಮುಂದೆ ಆ ಅಧಿನಿಯಮದ ಮೇರೆಗಿನ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದ ಯಾವುದೇ ವ್ಯವಹರಣೆಯು ಇತ್ಯರ್ಥದಲ್ಲಿರುವಾಗ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರನು ತನ್ನನ್ನು ನೇಮಕಾತಿ ಮಾಡಲಾಗಿದ್ದಂಥ ರಾಜ್ಯದಲ್ಲಿನ ಸಂವಾದಿ ಪ್ರಾಧಿಕಾರಿಗೆ ಅಂಥ ವ್ಯವಹರಣೆಯ ವರ್ಗಾವಣೆಗಾಗಿ ಅವನ ನಿಯೋಜನೆಯ ಮುಕ್ತಾಯದ ತರುವಾಯ ಆ ರಾಜ್ಯಕ್ಕೆ ವಾಪಸಾಗಿದ್ದೇನೆಂಬ ಆಧಾರದ ಮೇಲೆ ಅರ್ಜಿಯನ್ನು ಆ ಪ್ರಾಧಿಕಾರಿಗೆ ಸಲ್ಲಿಸಿರುವಲ್ಲಿ, ಆ ಪ್ರಾಧಿಕಾರಿಯು ಆ ಅರ್ಜಿಯನ್ನು ಸಂದರ್ಭಾನುಸಾರ ಕೇಂದ್ರ ಸರ್ಕಾರಕ್ಕೆ ಅಥವಾ ಅಂಥ ನೇಮಕಾತಿಯನ್ನು ಮಾಡಿರುವಂಥ ರಾಜ್ಯದ ಸರ್ಕಾರಕ್ಕೆ ಕಳುಹಿಸತಕ್ಕುದು

ಮತ್ತು ಅಂಥ ವ್ಯವಹರಣೆಯನ್ನು ಆ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ನಿಯಮಿಸಿದ ರೀತಿಯಲ್ಲಿ ವರ್ಗಾವಣೆ ಮಾಡತಕ್ಕುದು:

ಪರಂತು, ನಿಯಮಿಸಿದ ಅವಧಿಯೊಳಗೆ, ಸಂಬಂಧಪಟ್ಟ ಸರ್ಕಾರವು ಯಾವನೇ ಪ್ರಾಧಿಕಾರಿಯನ್ನು ನಿರ್ದಿಷ್ಟಪಡಿಸಿಲ್ಲದಿರುವ ಸಂದರ್ಭದಲ್ಲಿ, ವ್ಯವಹರಣೆಯು ಯಾವ ಪ್ರಾಧಿಕಾರಿಯ ಮುಂದೆ ಇತ್ಯರ್ಥದಲ್ಲಿರುವುದೋ ಆ ಪ್ರಾಧಿಕಾರಿಯು, ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರನು ಮಾಡಿಕೊಂಡ ಕೋರಿಕೆಯ ಮೇಲೆ ಮತ್ತು ಆ ಪ್ರಾಧಿಕಾರಿಗೆ ವಿವಾದವನ್ನು ಕಳುಹಿಸಿರುವ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಂಡ ತರುವಾಯ, ಅಂಥ ನೇಮಕಾತಿಯನ್ನು ಮಾಡಿರುವಂಥ ರಾಜ್ಯದಲ್ಲಿನ ಒಬ್ಬ ಪ್ರಾಧಿಕಾರಿಗೆ ಅಂಥ ವಿವಾದವನ್ನು ಕಳಿಸಿಕೊಡುವುದಕ್ಕಾಗಿ ಸಂಬಂಧಪಟ್ಟ ಸರ್ಕಾರಕ್ಕೆ ಅಂಥ ವ್ಯವಹರಣೆಯನ್ನು ಕಳಿಸಿಕೊಡತಕ್ಕುದು.

(3) (2)ನೇ ಉಪ-ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಕೇಂದ್ರ ಸರ್ಕಾರವು, ಲಿಖಿತ ಆದೇಶದ ಮೂಲಕ ಮತ್ತು ಅದರಲ್ಲಿ ನಮೂದಿಸಬೇಕಾದ ಕಾರಣಗಳಿಗಾಗಿ, ಸಂಬಂಧಪಟ್ಟ ಆ ಕಾರ್ಯಸಂಸ್ಥೆಯು ಇರುವಂಥ ರಾಜ್ಯದಲ್ಲಿನ ಪ್ರಾಧಿಕಾರಿಯ ಮುಂದೆ ಇತ್ಯರ್ಥದಲ್ಲಿರುವ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರನಿಗೆ ಸಂಬಂಧಪಟ್ಟ ಯಾವುದೇ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿದ ಯಾವುದೇ ವ್ಯವಹರಣೆಯನ್ನು ಹಿಂತೆಗೆದುಕೊಳ್ಳುವುದು ಮತ್ತು ಅಂಥ ಕೆಲಸಗಾರನನ್ನು ನೇಮಕಾತಿಮಾಡಿಕೊಂಡಿದ್ದ ರಾಜ್ಯದಲ್ಲಿರುವ ಹಾಗೂ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಅದನ್ನು ವರ್ಗಾವಣೆ ಮಾಡುವುದು ನ್ಯಾಯೋದ್ದೇಶಗಳಿಗಾಗಿ ವಿಹಿತವೆಂದು ಅದಕ್ಕೆ ಮನದಟ್ಟಾದರೆ, ಅದು ಹಾಗೆ ಮಾಡಬಹುದು.

(4) ಈ ಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಯನ್ನು ಯಾವ ಪ್ರಾಧಿಕಾರಿಗೆ ವರ್ಗಾವಣೆ ಮಾಡಲಾಗಿದೆಯೋ ಆ ಪ್ರಾಧಿಕಾರಿಯು, ಅದನ್ನು ಹೊಸದಾಗಿ ಆರಂಭಿಸಬಹುದು ಅಥವಾ ಅದನ್ನು ಹಾಗೆ ವರ್ಗಾವಣೆ ಮಾಡಲಾಗಿರುವ ಹಂತದಿಂದ ಮುಂದುವರೆಸಬಹುದು.

23. ಇಡಬೇಕಾದ ರಿಜಿಸ್ಟರುಗಳು ಮತ್ತು ಇತರ ದಾಖಲೆಗಳು:- (1) ಪ್ರತಿಯೊಬ್ಬ ಮುಖ್ಯ ನಿಯೋಜಕನು ಮತ್ತು ಪ್ರತಿಯೊಬ್ಬ ಕರಾರುಗಾರನು, ನಿಯೋಜಿತರಾದ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರು ಮತ್ತು ಅಂಥ ಕೆಲಸಗಾರರು ನಿರ್ವಹಿಸಿದ ಕೆಲಸದ ಸ್ವರೂಪ, ಕೆಲಸಗಾರರಿಗೆ ಸಂದಾಯ ಮಾಡಿದ ಮಜೂರಿ ದರಗಳು-ಇವುಗಳ ವಿವರಗಳನ್ನು ನೀಡುವಂಥ ರಿಜಿಸ್ಟರುಗಳನ್ನು ಮತ್ತು ದಾಖಲೆಗಳನ್ನು ಮತ್ತು ಇತರ ವಿವರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಇಡತಕ್ಕುದು.

(2) ಪ್ರತಿಯೊಬ್ಬ ಮುಖ್ಯ ನಿಯೋಜಕನು ಮತ್ತು ಪ್ರತಿಯೊಬ್ಬ ಕರಾರುಗಾರನು, ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರನ್ನು ನಿಯೋಜಿಸಲಾಗಿರುವ ಕಾರ್ಯಸಂಸ್ಥೆಯ ಆವರಣದೊಳಗೆ ಕೆಲಸದ ವೇಳೆಗಳು, ಕರ್ತವ್ಯದ ಸ್ವರೂಪ ಇವುಗಳ ಬಗೆಗಿನ ವಿವರಗಳನ್ನು ಒಳಗೊಂಡಿರುವ ನಿಯಮಿಸಿದ ನಮೂನೆಯಲ್ಲಿರುವ ನೋಟೀಸುಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ಮಾಹಿತಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರದರ್ಶಿಸತಕ್ಕುದು.

24. ಅಡ್ಡಿಗಳು:-20ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ನೇಮಕ ಮಾಡಿದ ಪರಿಶೀಲಕನನ್ನು ಅಥವಾ ವ್ಯಕ್ತಿಯನ್ನು (ಇನ್ನು ಮುಂದೆ ಅಧಿಕೃತ ವ್ಯಕ್ತಿಯೆಂದು ಉಲ್ಲೇಖಿಸಲಾಗಿದೆ) ಈ ಅಧಿನಿಯಮದ ಮೇರೆಗಿನ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ಅಡ್ಡಿಪಡಿಸುವ ಅಥವಾ ಈ ಅಧಿನಿಯಮವು ಅನ್ವಯವಾಗುವ ಕಾರ್ಯಸಂಸ್ಥೆಗೆ ಅಥವಾ ಕರಾರುಗಾರನಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಪರಿಶೀಲನೆ, ಪರೀಕ್ಷೆ, ವಿಚಾರಣೆ ಅಥವಾ ತನಿಖೆಯನ್ನು ಮಾಡುವುದಕ್ಕಾಗಿ ಆ ಪರಿಶೀಲಕನಿಗೆ ಅಥವಾ ಅಧಿಕೃತ ವ್ಯಕ್ತಿಗೆ ಯಾವುದೇ ಯುಕ್ತ ಸೌಲಭ್ಯವನ್ನು ಒದಗಿಸಲು ನಿರಾಕರಿಸುವ ಅಥವಾ ಉದ್ದೇಶಪೂರ್ವಕವಾಗಿ ಉಪೇಕ್ಷಿಸುವ ಯಾರೇ ಆಗಲಿ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ಈ ಅಧಿನಿಯಮದ ಅನುಸರಣೆಯಲ್ಲಿ ಇಟ್ಟಿರುವ ಯಾವುದೇ ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಯಾವನೇ ಪರಿಶೀಲಕನು ಅಥವಾ ಅಧಿಕೃತ ವ್ಯಕ್ತಿಯು ಕೇಳಿದಾಗ ಹಾಜರುಪಡಿಸಲು ಉದ್ದೇಶಪೂರ್ವಕವಾಗಿ ನಿರಾಕರಿಸುವ ಅಥವಾ ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವನೇ ಪರಿಶೀಲಕನ ಅಥವಾ ಅಧಿಕೃತ ವ್ಯಕ್ತಿಯ ಮುಂದೆ ಹಾಜರಾಗಲು ಅಥವಾ ಅವನಿಂದ ಪರೀಕ್ಷಿಸಲ್ಪಡಲು ಯಾವನೇ ವ್ಯಕ್ತಿಯನ್ನು ಪ್ರತಿಬಂಧಿಸುವ ಅಥವಾ ಪ್ರತಿಬಂಧಿಸಲು ಪ್ರಯತ್ನಿಸುವ ಅಥವಾ ಪ್ರತಿಬಂಧಿಸುವ ಸಂಭವವಿದೆಯೆಂದು ನಂಬಲು ಅವನು ಕಾರಣಹೊಂದಿರುವ ಯಾವುದೇ ಕಾರ್ಯವನ್ನು ಮಾಡುವ ಯಾರೇ ಆಗಲಿ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

25. ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರ ನಿಯೋಜನೆಗೆ ಸಂಬಂಧಿಸಿದ ಉಪಬಂಧಗಳ ಉಲ್ಲಂಘನೆ:- ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರ ನಿಯೋಜನೆಯನ್ನು ನಿಯಂತ್ರಿಸುವ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ, ಅಥವಾ ಈ ಅಧಿನಿಯಮದ ಮೇರೆಗೆ ನೀಡಿದ ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸುವ ಯಾರೇ ಆಗಲಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ ಅಂಥ ಮೊದಲ ಉಲ್ಲಂಘನೆಯ ಅಪರಾಧ ನಿರ್ಣಯದ ತರುವಾಯ ಮುಂದುವರೆಯುವ ಅಂಥ ಉಲ್ಲಂಘನೆಯ ಅವಧಿಯಲ್ಲಿ ಪ್ರತಿದಿವಸಕ್ಕಾಗಿ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

26. ಇತರ ಅಪರಾಧಗಳು:- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳ ಪೈಕಿ ಯಾವ ಉಪಬಂಧದ ಉಲ್ಲಂಘನೆಗಾಗಿ, ಯಾವುದೇ ಇತರ ದಂಡವನ್ನು ಎಲ್ಲಿಯೂ ಉಪಬಂಧಿಸಿರುವುದಿಲ್ಲವೋ ಆ ಉಪಬಂಧವನ್ನು ಯಾವನೇ ವ್ಯಕ್ತಿಯು ಉಲ್ಲಂಘಿಸಿದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

27. (1) ಕಂಪನಿಗಳಿಂದ ಅಪರಾಧಗಳು:- ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಸಮಯದಲ್ಲಿ ಆ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರದ ನಿರ್ವಹಣೆಯ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ತಮ್ಮ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕುದು:

ಪರಂತು, ಈ ಉಪ-ಪ್ರಕರಣದಲ್ಲಿರುವುದಾವುದೂ ಅಂಥ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವನೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿದೆ ಎಂದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ಅಪರಾಧಿಯೆಂದು ಭಾವಿಸತಕ್ಕುದು ಮತ್ತು ತಮ್ಮ ವಿರುದ್ಧದ ವ್ಯವಹರಣೆಗೆ ಮತ್ತು ತದನುಸಾರವಾದ ದಂಡನೆಗೆ ಗುರಿಯಾಗಲು ಅವರು ಬದ್ಧರಾಗತಕ್ಕುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ‍ನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

28. ಅಪರಾಧಗಳ ಸಂಜ್ಞೇಯತೆ:- ಒಬ್ಬ ಪರಿಶೀಲಕನು ಅಥವಾ ಅಧಿಕೃತನಾದ ವ್ಯಕ್ತಿಯು ಮಾಡಿದ ದೂರಿನ ಮೇಲೆ ಅಥವಾ ಲಿಖಿತ ಪೂರ್ವ ಮಂಜೂರಾತಿಯಿಂದ ಹೊರತು ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕುದಲ್ಲ ಮತ್ತು ಮಹಾನಗರ ಮ್ಯಾಜಿಸ್ಟ್ರೇಟ್‌ನ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟಿನ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವ ನ್ಯಾಯಾಲಯವೂ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕುದಲ್ಲ.

29. ಪ್ರಾಸಿಕ್ಯೂಷನ್‌ಗಳ ಕಾಲಪರಿಮಿತಿ:- ಅಪರಾಧ ಮಾಡಲಾಗಿದೆ ಎಂಬ ಆರೋಪವು ಸಂಬಂಧಪಟ್ಟ ಪರಿಶೀಲಕನ ಅಥವಾ ಅಧಿಕೃತ ವ್ಯಕ್ತಿಯ ಗಮನಕ್ಕೆ ಬಂದ ದಿನಾಂಕದಿಂದ ಮೂರು ತಿಂಗಳೊಳಗೆ ಅದರ ಬಗ್ಗೆ ದೂರನ್ನು ಮಾಡಿದ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಒಂದು ಅಪರಾಧವನ್ನು ಸಂಜ್ಞಾನಕ್ಕೆ ಯಾವುದೇ ನ್ಯಾಯಾಲಯ ತೆಗೆದುಕೊಳ್ಳತಕ್ಕುದಲ್ಲ:

ಪರಂತು, ಅಪರಾಧವು, ಒಬ್ಬ ಪರಿಶೀಲಕನು ಅಥವಾ ಅಧಿಕೃತ ವ್ಯಕ್ತಿಯು ಮಾಡಿದ ಲಿಖಿತ ಆದೇಶದ ಉಲ್ಲಂಘನೆ ಆಗಿರುವಲ್ಲಿ, ಅದರ ಬಗ್ಗೆ ದೂರನ್ನು, ಆ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಲಾದ ದಿನಾಂಕದಿಂದ ಆರು ತಿಂಗಳೊಳಗೆ ಮಾಡಬಹುದು.

30. ಈ ಅಧಿನಿಯಮಕ್ಕೆ ಅಸಂಗತವಾದ ಕಾನೂನುಗಳ ಮತ್ತು ಒಪ್ಪಂದಗಳ ಪರಿಣಾಮ:- (1) ಈ ಅಧಿನಿಯಮದ ಉಪಬಂಧಗಳು, ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಒಪ್ಪಂದದ ನಿಬಂಧನೆಗಳಲ್ಲಿ ಅಥವಾ ಸೇವಾ ಕರಾರಿನಲ್ಲಿ ಅಥವಾ ಆ ಕಾರ್ಯಸಂಸ್ಥೆಗೆ ಅನ್ವಯವಾಗುವ ಯಾವುದೇ ಸ್ಥಾಯಿ ಆದೇಶಗಳಲ್ಲಿ, ಅವುಗಳನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿರಲಿ, ತರುವಾಯ ಮಾಡಿರಲಿ, ಅಸಂಗತವಾದುದು ಏನೇ ಇದ್ದರೂ ಪರಿಣಾಮಕಾರಿಯಾಗತಕ್ಕುದು:

ಪರಂತು, ಯಾವುದೇ ಅಂಥ ಕಾನೂನಿನ, ಒಪ್ಪಂದದ, ಸೇವಾಕರಾರಿನ ಅಥವಾ ಸ್ಥಾಯೀ ಆದೇಶಗಳ ಮೇರೆಗೆ, ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾದ ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರು ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ಹಕ್ಕುಳ್ಳವರಾಗಬಹುದಾದುದಕ್ಕಿಂತಲೂ ಹೆಚ್ಚು ಅನುಕೂಲಕರವಾದ ಪ್ರಯೋಜನಗಳಿಗೆ ಹಕ್ಕುಳ್ಳವರಾಗಿರುವಲ್ಲಿ, ಅಂತರ-ರಾಜ್ಯ ವಲಸೆ ಹೋಗುವ ಆ ಕೆಲಸಗಾರರು, ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ಪ್ರಯೋಜನವನ್ನು ಪಡೆಯುತ್ತಿದ್ದಾಗ್ಯೂ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಆ ಹೆಚ್ಚಿನ ಅನುಕೂಲಕರವಾದ ಪ್ರಯೋಜನಗಳಿಗೆ ಹಕ್ಕುಳ್ಳವರಾಗಿರುವುದು ಮುಂದುವರೆಯತಕ್ಕುದು.

(2) ಈ ಅಧಿನಿಯಮದಲ್ಲಿ ಇರುವ ಯಾವುದನ್ನೂ, ಅಂತರ-ರಾಜ್ಯ ವಲಸೆಹೋಗುವ ಯಾರೇ ಕೆಲಸಗಾರರು ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ಹಕ್ಕುಳ್ಳವರಾಗಬಹುದಾದುದಕ್ಕಿಂತಲೂ ಹೆಚ್ಚು ಅನುಕೂಲಕರವಾದ ಹಕ್ಕುಗಳನ್ನು ಅಥವಾ ವಿಶೇಷಾಧಿಕಾರಗಳನ್ನು ಅವರಿಗೆ ನೀಡುವುದಕ್ಕಾಗಿ, ಸಂದರ್ಭಾನುಸಾರ, ಮುಖ್ಯ ನಿಯೋಜಕನೊಂದಿಗೆ ಅಥವಾ ಕರಾರುಗಾರನೊಂದಿಗೆ ಒಪ್ಪಂದ ಮಾಡಿಕೊಳ್ಳುವುದನ್ನು ಪ್ರತಿಪಾದಿಸುವುದಾಗಿ ಅರ್ಥೈಸತಕ್ಕುದಲ್ಲ.

31. ವಿಶೇಷ ಸಂದರ್ಭಗಳಲ್ಲಿ ವಿನಾಯಿತಿ ನೀಡುವ ಅಧಿಕಾರ:- ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳು ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು ಮತ್ತು ಅಂಥ ಅವಧಿಗಾಗಿ ಅಥವಾ ಅವಧಿಗಳಿಗಾಗಿ, ಯಾವುದೇ ಕಾರ್ಯಸಂಸ್ಥೆಗೆ ಅಥವಾ ಕಾರ್ಯಸಂಸ್ಥೆಗಳ ವರ್ಗಕ್ಕೆ ಅಥವಾ ಯಾವನೇ ಕರಾರುಗಾರನಿಗೆ ಅಥವಾ ಕರಾರುಗಾರ ವರ್ಗಕ್ಕೆ ಅಥವಾ ಅಂಥ ಕಾರ್ಯಸಂಸ್ಥೆಯಲ್ಲಿನ ಅಂತರರಾಜ್ಯ ವಲಸೆಹೋಗುವ ಯಾರೇ ಕೆಲಸಗಾರರಿಗೆ ಅಥವಾ ಅಂಥ ಕೆಲಸಗಾರರ ವರ್ಗಕ್ಕೆ ಅಥವಾ ಆ ಸಂಬಂಧದಲ್ಲಿ, ಅಂಥ ಕಾರ್ಯಸಂಸ್ಥೆಯ ಅಥವಾ ಕಾರ್ಯಸಂಸ್ಥೆಗಳ ವರ್ಗದಲ್ಲಿನ ನೇಮಕಾತಿ ವಿಧಾನಗಳು ಮತ್ತು ನಿಯೋಜನೆಯ ಷರತ್ತುಗಳು ಮತ್ತು ಎಲ್ಲ ಇತರ ಸುಸಂಗತ ಸಂದರ್ಭಗಳನ್ನು ಗಮನಿಸಿ ಹಾಗೆ ನಿರ್ದೇಶಿಸುವುದು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಎಲ್ಲ ಅಥವಾ ಯಾವುದೇ ಉಪಬಂಧಗಳು ಅನ್ವಯವಾಗತಕ್ಕುದಲ್ಲವೆಂದು ನಿರ್ದೇಶಿಸುವುದು ನ್ಯಾಯಯುತವಾಗಿದೆ ಅಥವಾ ಯುಕ್ತವಾಗಿದೆಯೆಂದು ಆ ಸರ್ಕಾರಕ್ಕೆ ಮನವರಿಕೆಯಾದರೆ, ಅದು ಹಾಗೆ ಅನ್ವಯವಾಗತಕ್ಕದಲ್ಲವೆಂದು ನಿರ್ದೇಶಿಸಬಹುದು.

32. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮದ ರಕ್ಷಣೆ:- (1) ಯಾವನೇ ನೋಂದಣಿ ಅಧಿಕಾರಿಯ, ಲೈಸೆನ್ಸ್ ನೀಡುವ ಅಧಿಕಾರಿಯ ಅಥವಾ ಸರ್ಕಾರದ ಯಾವನೇ ಇತರ ನೌಕರನ ವಿರುದ್ಧ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಅನುಸರಣೆಯಲ್ಲಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಕಾನೂನು ವ್ಯವಹರಣೆಗಳನ್ನು ಹೂಡತಕ್ಕುದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಅಥವಾ ಹೊರಡಿಸಿದ ಯಾವುದೇ ನಿಯಮದ ಅಥವಾ ಅಧಿಸೂಚನೆಯ ಅಥವಾ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಸರ್ಕಾರದ ವಿರುದ್ಧ ಯಾವುದೇ ದಾವೆ, ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕುದಲ್ಲ.

33. ನಿರ್ದೇಶನಗಳನ್ನು ನೀಡುವ ಅಧಿಕಾರ:- ಈ ಅಧಿನಿಯಮದಲ್ಲಿ ಒಳಗೊಂಡಿರುವ ಉಪಬಂಧಗಳನ್ನು ಯಾವುದೇ ರಾಜ್ಯದಲ್ಲಿ ಜಾರಿಗೊಳಿಸುವ ವಿಚಾರದಲ್ಲಿ, ಕೇಂದ್ರ ಸರ್ಕಾರವು ಆ ರಾಜ್ಯದ ಸರ್ಕಾರಕ್ಕೆ ನಿರ್ದೇಶನಗಳನ್ನು ಕೊಡಬಹುದು.

34. ತೊಂದರೆಗಳ ನಿವಾರಣಾಧಿಕಾರ:- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅದಕ್ಕೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ, ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷಗಳು ಮುಗಿದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕುದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕುದು.

35. ನಿಯಮ ರಚನಾಧಿಕಾರ:- (1) ಸಮುಚಿತ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 4ನೇ ಪ್ರಕರಣದ ಮೇರೆಗೆ ಕಾರ್ಯಸಂಸ್ಥೆಯ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಬಹುದಾದ ನಮೂನೆ ಮತ್ತು ರೀತಿ, ಆ ಬಗ್ಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಆ ಪ್ರಕರಣದ ಮೇರೆಗೆ ನೀಡಲಾದ ನೋಂದಣಿ ಪ್ರಮಾಣ ಪತ್ರದ ನಮೂನೆ;

(ಬಿ) 9ನೇ ಪ್ರಕರಣದ ಮೇರೆಗೆ ಲೈಸೆನ್ಸಿನ ನೀಡಿಕೆಗಾಗಿ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದಾದ ನಮೂನೆ ಮತ್ತು ಅದು ಒಳಗೊಂಡಿರಬಹುದಾದ ವಿವರಗಳು;

(ಸಿ) ಲೈಸೆನ್ಸಿನ ನೀಡಿಕೆಗಾಗಿನ ಅರ್ಜಿಯ ಸಂಬಂಧದಲ್ಲಿ ಮಾಡಬೇಕಾದ ತನಿಖೆಯ ವಿಧಾನ ಮತ್ತು ಲೈಸೆನ್ಸನ್ನು ನೀಡುವಲ್ಲಿ ಅಥವಾ ನಿರಾಕರಿಸುವಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾದ ವಿಷಯಗಳು;

(ಡಿ) ಈ ಅಧಿನಿಯಮದ ಮೇರೆಗೆ ನೀಡಬಹುದಾದ ಅಥವಾ ನವೀಕರಿಸಬಹುದಾದ ಲೈಸೆನ್ಸಿನ ನಮೂನೆ, ಯಾವ ಷರತ್ತುಗಳಿಗೊಳಪಟ್ಟು ಲೈಸೆನ್ಸನ್ನು ನೀಡಬಹುದೋ ಅಥವಾ ನವೀಕರಿಸಬಹುದೋ ಆ ಷರತ್ತುಗಳು, ಲೈಸೆನ್ಸಿನ ನೀಡಿಕೆಗೆ ಅಥವಾ ನವೀಕರಣಕ್ಕೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಲೈಸೆನ್ಸಿನ ಷರತ್ತುಗಳ ಯುಕ್ತ ಪಾಲನೆಗಾಗಿ ಒದಗಿಸಬೇಕೆಂದು ಅಗತ್ಯಪಡಿಸಲಾದ ಭದ್ರತೆ ಯಾವುದಾದರೂ ಇದ್ದರೆ ಅದು;

(ಇ) 10ನೇ ಪ್ರಕರಣದ ಮೇರೆಗೆ ಯಾವ ಸನ್ನಿವೇಶಗಳಲ್ಲಿ ಲೈಸೆನ್ಸನ್ನು ವ್ಯತ್ಯಾಸಗೊಳಿಸಬಹುದೋ ಅಥವಾ ತಿದ್ದುಪಡಿ ಮಾಡಬಹುದೋ ಅಂಥ ಸನ್ನಿವೇಶಗಳು;

(ಎಫ್) 11ನೇ ಪ್ರಕರಣದ ಮೇರೆಗೆ ಅಪೀಲುಗಳನ್ನು ದಾಖಲು ಮಾಡಬಹುದಾದಂಥ ನಮೂನೆ ಮತ್ತು ರೀತಿ ಮತ್ತು ಆ ಅಪೀಲುಗಳನ್ನು ವಿಲೇ ಮಾಡುವಲ್ಲಿ ಅಪೀಲು ಅಧಿಕಾರಿಗಳು ಅನುಸರಿಸಬೇಕಾದ ಪ್ರಕ್ರಿಯೆ;

(ಜಿ) 13ನೇ ಪ್ರಕರಣದ ಮೇರೆಗೆ, ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರನು ಹಕ್ಕುಳ್ಳಂಥ ಮಜೂರಿ ದರಗಳು, ರಜಾದಿವಸಗಳು, ಕೆಲಸದ ವೇಳೆಗಳು ಮತ್ತು ಇತರ ಸೇವಾ ಷರತ್ತುಗಳು;

(ಹೆಚ್) 17ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕರಾರುಗಾರನು ಅಂತರ-ರಾಜ್ಯ ವಲಸೆ ಹೋಗುವ ಕೆಲಸಗಾರರಿಗೆ ಸಂದಾಯವಾಗಬೇಕಾದ ಮಜೂರಿಗಳನ್ನು ಯಾವ ಅವಧಿಯೊಳಗೆ ಸಂದಾಯ ಮಾಡಬೇಕೋ ಆ ಅವಧಿ ಮತ್ತು ಅದರ (2)ನೇ ಉಪ-ಪ್ರಕರಣದ ಮೇರೆಗೆ ಅಂಥ ಸಂದಾಯವನ್ನು ಪ್ರಮಾಣೀಕರಿಸುವ ರೀತಿ;

(ಐ) ಕರಾರುಗಾರನು ಯಾವ ಕಾಲದೊಳಗೆ ಭತ್ಯಗಳನ್ನು ಅಥವಾ ಸೌಲಭ್ಯಗಳನ್ನು ಒದಗಿಸಬೇಕೆಂದು ಮತ್ತು ನಿರ್ವಹಿಸಬೇಕೆಂದು ಈ ಅಧಿನಿಯಮವು ಅಗತ್ಯ ಪಡಿಸಿದೆಯೋ, ಅದನ್ನು ಕರಾರುಗಾರನು ಒದಗಿಸಬಹುದಾದ ಆ ಕಾಲ ಮತ್ತು ಕರಾರುಗಾರನು ತಪ್ಪಿದ ಸಂದರ್ಭದಲ್ಲಿ, 18ನೇ ಪ್ರಕರಣದ ಮೇರೆಗೆ ಮುಖ್ಯ ನಿಯೋಜಕನು ಹಾಗೆ ಒದಗಿಸಬಹುದೋ ಆ ಕಾಲ;

(ಜೆ) 20ನೇ ಪ್ರಕರಣದ ಮೇರೆಗೆ ಪರಿಶೀಲಕರು ಚಲಾಯಿಸಬಹುದಾದ ಅಧಿಕಾರಗಳು;

(ಕೆ) 23ನೇ ಪ್ರಕರಣದ ಮೇರೆಗೆ ಮುಖ್ಯ ನಿಯೋಜಕರು ಮತ್ತು ಕರಾರುಗಾರರು ಇಡಬೇಕಾದ ರಿಜಿಸ್ಟರುಗಳ ಮತ್ತು ದಾಖಲೆಗಳ ನಮೂನೆ ಮತ್ತು ಅವರು ಪ್ರದರ್ಶಿಸಬೇಕಾದ ನೋಟೀಸುಗಳು ಒಳಗೊಂಡಿರಬೇಕಾದ ವಿವರಗಳು ಮತ್ತು ಮಾಹಿತಿ;

(ಎಲ್) ವಿವರ ಪಟ್ಟಿಕೆಗಳನ್ನು ಸಲ್ಲಿಸುವ ರೀತಿ ಮತ್ತು ಅಂಥ ವಿವರ ಪಟ್ಟಿಕೆಗಳನ್ನು ಯಾವ ನಮೂನೆಗಳಲ್ಲಿ ಮತ್ತು ಪ್ರಾಧಿಕಾರಗಳಿಗೆ ಸಲ್ಲಿಸಬಹುದೋ ಆ ನಮೂನೆ ಮತ್ತು ಪ್ರಾಧಿಕಾರಗಳು;

(ಎಂ) ಅಂತರ-ರಾಜ್ಯ ವಲಸೆಹೋಗುವ ಕೆಲಸಗಾರರಿಗೆ ಕಾನೂನು ನೆರವು;

(ಎನ್) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕೆಂದು ಅಗತ್ಯಪಡಿಸಿದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇರಿಸತಕ್ಕುದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ, ಆದರೆ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗದಂತೆ ಇರತಕ್ಕುದು.

36. ನಿರಸನಗಳು ಮತ್ತು ಉಳಿಸುವಿಕೆಗಳು:- (1) ಒರಿಸ್ಸಾ ದಾದನ್ ಕಾರ್ಮಿಕ (ನಿಯಂತ್ರಣ ಮತ್ತು ವಿನಿಯಮನ) ಅಧಿನಿಯಮ, 1975 (ಒರಿಸ್ಸಾ ಅಧಿನಿಯಮ 1975ರ 42) ಮತ್ತು ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ, ಈ ಅಧಿನಿಯಮಕ್ಕೆ ಸಂವಾದಿಯಾದ ಯಾವುದೇ ಕಾನೂನು ನಿರಸಿತಗೊಳ್ಳತಕ್ಕುದು.

(2) ಅಂಥ ನಿರಸನವಿದ್ದಾಗ್ಯೂ, ಹಾಗೆ ನಿರಸಿತವಾದ ಅಧಿನಿಯಮದ ಅಥವಾ ಕಾನೂನಿನ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವು ಅಥವಾ ಕೈಗೊಂಡ ಯಾವುದೇ ಕ್ರಮವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಆ ಕಾರ್ಯವನ್ನು ಅಥವಾ ಕ್ರಮವನ್ನು, ಅಂಥ ಕಾರ್ಯವನ್ನು ಮಾಡಿದ್ದಾಗ ಅಥವಾ ಅಂಥ ಕ್ರಮವನ್ನು ಕೈಗೊಂಡಿದ್ದಾಗ ಸದರಿ ಉಪಬಂಧಗಳು ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕುದು ಮತ್ತು ಅವು ತದನುಸಾರವಾಗಿ, ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯದ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಪಡಿಸುವವರೆಗೆ, ಜಾರಿಯಲ್ಲಿರುವುದು ಮುಂದುವರಿಯತಕ್ಕುದು.

ಅನುಸೂಚಿ

(21ನೇ ಪ್ರಕರಣ ನೋಡಿ)

1. ಕೆಲಸಗಾರರ ನಷ್ಟಪರಿಹಾರ ಅಧಿನಿಯಮ, 1923 (1923ರ 8)
2. ಮಜೂರಿಗಳ ಸಂದಾಯ ಅಧಿನಿಯಮ, 1936 (1936ರ 4)
3. ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)
4. ನಿಯೋಜಿತರ ರಾಜ್ಯ ವಿಮಾ ಅಧಿನಿಯಮ, 1948 (1948ರ 34)
5. ನಿಯೋಜಿತರ ಭವಿಷ್ಯ ನಿಧಿಗಳು ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (1952ರ 19)
6. ಪ್ರಸೂತಿ ಸೌಕರ್ಯ ಅಧಿನಿಯಮ, 1961 (1961ರ 5)

* * * * *